**ಸಂಪುಟ:** 06 **ಸಂಚಿಕೆ:** 146 **ಪುಟಗಳು:** 08 **ಶನಿವಾರ** 08 ಆಗಸ್ಟ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ತಮ್ಮ ಬಲಹೀನತೆಯನ್ನು ಅರಿತವರೇ ನಿಜವಾದ ಶಕ್ತಿವಂತರು. ತಮ್ಮ ತಪ್ಪುಗಳನ್ನು ಗುರುತಿಸಿಕೊಳ್ಳಲು ಸಾಧ್ಯವಾದವರು ಬುದ್ಧಿವಂತರು. ಆ ಅರಿವಿನೊಂದಿಗೆ ಬೆಳೆಯೋಣ!

## ಪುತ್ರಿಗೆ ಕೆ.ಹೆಚ್.ಮುನಿಯಪ್ಪ ಸಚಿವ ಸ್ಥಾನ ತ್ಯಾಗ ಮಾಡುವ ಸುದ್ದಿ ಸತ್ಯಕ್ಕೆ ದೂರ: ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು



ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಾದ ಕೆ.ಹೆಚ್. ಮುನಿಯಪ್ಪ ಅವರು ಆಹಾರ ಇಲಾಖೆ ಖಾತೆಗೆ ರಾಜೀನಾಮೆ ನೀಡಿ, ಅವರ ಮಗಳು ಶಾಸಕಿ ರೂಪಕಲಾ ಶಶಿಧರ್ ಅವರಿಗೆ ಸಚಿವ ಸ್ಥಾನವನ್ನು ತ್ಯಾಗ ಮಾಡಲಿದ್ದಾರೆ ಎಂಬ ಸುದ್ದಿ ಸತ್ಯಕ್ಕೆ ದೂರವಾದದ್ದು ಎಂದು ಸಚಿವರ ಮಾಧ್ಯಮ ವಿಭಾಗ ಸ್ಪಷ್ಟನೆ ನೀಡಿದೆ. ಈ ಸಂಬಂಧ ಮಾಧ್ಯಮ ಪ್ರಕಟಣೆ ಹೊರಡಿಸಲಾಗಿದ್ದು, ಕೆಲ ಮಾಧ್ಯಮಗಳು ಈ ಸುದ್ದಿಯನ್ನು ಪ್ರಕಟಿಸುತ್ತಿದ್ದು, ಈ ವರದಿ ಸತ್ಯಕ್ಕೆ ದೂರವಾಗಿದೆ. ದಲಿತ ಎಡ ಸಮುದಾಯದ ಹಿರಿಯ ಹಾಗೂ ಮುಂಚೂಣಿ ನಾಯಕ ಕೆ.ಹೆಚ್. ಮುನಿಯಪ್ಪ ಅವರು ಕಳೆದ 50 ವರ್ಷಗಳ ಸುದೀರ್ಘ ಕಾಲದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ, ನಾಯಕರಾಗಿ ಪಕ್ಷವನ್ನು ಬಲವರ್ಧನೆಗೊಳಿಸುತ್ತಾ, ಇಂದಿರಾ ಗಾಂಧಿಯವರ ಕಾಲದಿಂದ ಇಲ್ಲಿಯವರೆಗೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿ ಪಕ್ಷವನ್ನು ಕಟ್ಟುತ್ತಾ, ಕಾಂಗ್ರೆಸ್ ಪಕ್ಷಕ್ಕೆ ತಮ್ಮ ನಿಷ್ಠೆಯನ್ನು ತೋರಿ, ಪಕ್ಷದ ಸಿದ್ಧಾಂತಗಳಿಗೆ ಬದ್ಧರಾಗಿದ್ದಾರೆ ಎಂದು ಸ್ಪಷ್ಟಪಡಿಸಿದೆ. ಕೋಲಾರ ಲೋಕಸಭಾ ಕ್ಷೇತ್ರದಿಂದ ಸತತವಾಗಿ 7 ಬಾರಿ ಸಂಸದರಾಗಿ, ಕೇಂದ್ರದಲ್ಲಿ ಮೂರು ಬಾರಿ ಸಚಿವರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ಶಂಕರಾನಂದ ಹಾಗೂ ಜಾಫರ್ ಶರೀಫ್ ಅವರ ನಂತರ ಕೆ.ಹೆಚ್. ಮುನಿಯಪ್ಪರವರ ದಾಖಲೆ ಜಯ ಐತಿಹಾಸಿಕವಾಗಿದೆ ಎಂದಿದೆ. ದಕ್ಷಿಣ ಭಾರತದ ಬಾಬು ಜಗಜೀವನರಾಮ್ ಎಂದೇ ಖ್ಯಾತರಾಗಿರುವ ಕೆ.ಹೆಚ್. ಮುನಿಯಪ್ಪ ಅವರು ಪ್ರಸ್ತುತ ಆಹಾರ ಇಲಾಖೆಯನ್ನು ಉತ್ತಮವಾಗಿ ಮುನ್ನೆಡೆಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಖಾತೆಯೊಂದಿಗೆ ಪರಿಶಿಷ್ಟ ಜಾತಿಯ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಖಾತೆ ಬದಲಾವಣೆಗಾಗಿ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರಿಗೆ ಬೇಡಿಕೆ ಇಟ್ಟಿದ್ದಾರೆ. ಸಕರಾತ್ಮಕ ಸ್ಪಂದನೆಯೊಂದಿಗೆ ಈ ಖಾತೆ ನೀಡುವುದು ಬಹುತೇಕ ಖಚಿತವಾಗಿದೆ. ಮಾಧ್ಯಮಗಳಲ್ಲಿ ಇತ್ತೀಚೀಗೆ ಹರಿದಾಡುತ್ತಿರುವ ಸುದ್ದಿಗಳು ನೈಜತೆಗೆ ದೂರವಾಗಿದ್ದು, ಅವುಗಳನ್ನು ಪರಿಗಣಿಸದಿರುವಂತೆ ಕೋರಲಾಗಿದೆ.

## ಗೂಂಡಾಗಿರಿ ಮಾಡಿ ಬಲವಂತವಾಗಿ ಹೊರಟ್ಟಿ ಬಳಿ ರಾಜೀನಾಮೆ ಕೊಡಿಸಿದ್ದಾರೆ: ಅಶೋಕ್ ಕಿಡಿ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ಅವರು ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ. ಈ ವಿಚಾರವಾಗಿ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ತೀವ್ರ ಅಸಮಾಧಾನ ಹೊರಹಾಕಿದ್ದಾರೆ.

ಗೂಂಡಾಗಿರಿ ಮಾಡಿ ತಮ್ಮ ತಂಡ ಕಟ್ಟಿಕೊಂಡು ಹೋಗಿ ಬಲವಂತವಾಗಿ ಅವರ ರಾಜೀನಾಮೆ ಕೊಡಿಸಿದ್ದಾರೆ. ಕರ್ನಾಟಕಕ್ಕೆ ಇದು ದೊಡ್ಡ ಕಳಂಕ. ಈ ರೀತಿ ಘಟನೆ ರಾಜ್ಯ ರಾಜಕೀಯದಲ್ಲಿ ಹಿಂದೆ ನಡೆದಿಲ್ಲ. ಇದರ ವಿರುದ್ಧ ಹೋರಾಟ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಮುಂಗಾರು ಅಧಿವೇಶನ ಆರಂಭವಾದ ಬಳಿಕ ಅಂದರೆ ಆ. 14 ರಂದು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಲು ಬಸವರಾಜ ಹೊರಟ್ಟಿ ತೀರ್ಮಾನಿಸಿದ್ದರು. ಆದರೆ ಮುಖ್ಯಮಂತ್ರಿ ಡಿಕೆ ಶಿ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರ ಮನವೊಲಿಕೆಯ ಬಳಿಕ ಅವರು ರಾಜೀನಾಮೆ ನಿರ್ಧಾರ ಕೈಗೊಂಡಿದ್ದಾರೆ.

ಸಭಾಪತಿಯಾಗಿ ಬಸವರಾಜ ಹೊರಟ್ಟಿ ಅವರು ನೀಡಿದ ಕೊಡುಗೆ ಮತ್ತು ಮಾಡಿದ ಕೆಲಸಗಳು ಇತಿಹಾಸದಲ್ಲಿ ಶಾಶ್ವತವಾಗಿರಲಿವೆ. ರಾಜೀನಾಮೆಯ ನಂತರವೂ ಅವರು ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿ ಮುಂದುವರಿಯಬೇಕು. ಯುವಕರಿಗೆ ಹಾಗೂ ಹೊಸ ರಾಜಕಾರಣಿಗಳಿಗೆ ತಮ್ಮ ಸುದೀರ್ಘ ಅನುಭವದ ಮೂಲಕ ಮಾರ್ಗದರ್ಶನ ನೀಡಬೇಕು ಎಂಬುದು ಸಾರ್ವಜನಿಕರ ಅಪೇಕ್ಷೆಯಾಗಿದೆ. ಅವರ ಹಿರಿತನ ಮತ್ತು ಅಪಾರ ಅನುಭವಕ್ಕೆ ರಾಜ್ಯದ ಜನತೆ ಸದಾ ಗೌರವಪೂರ್ವಕವಾಗಿ ಋಣಿಯಾಗಿರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಹೊರಟ್ಟಿ ರಾಜೀನಾಮೆ ಪ್ರಕ್ರಿಯೆಯ ಬಗ್ಗೆ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

# ರಾಜೀನಾಮೆ ಕೊಡು ಅಂದರು ಕೊಟ್ಟೆ



ಸಭಾಪತಿ ಹುದ್ದೆಗೆ ಬಸವರಾಜ್ ಹೊರಟ್ಟಿ ರಾಜೀನಾಮೆ ನೀಡಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಸರ್ಕಾರಕ್ಕೆ ಬಹುಮತ ಇರುವ ಹಿನ್ನೆಲೆಯಲ್ಲಿ ಬಸವರಾಜ್ ಹೊರಟ್ಟಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ಚಿಂತನೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ಬಸವರಾಜ ಹೊರಟ್ಟಿ ಅವರು ತಮ್ಮ ಸ್ಥಾನಕ್ಕೆ ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದಾರೆ.

ರಾಜೀನಾಮೆ ಪತ್ರದಲ್ಲೂ ಸ್ವಇಚ್ಛೆಯಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಬಸವರಾಜ್ ಹೊರಟ್ಟಿ ಉಲ್ಲೇಖಿಸಿದ್ದಾರೆ. ಈ ಮೊದಲು ಅವರು, ಆ.14ರಂದು ರಾಜೀನಾಮೆ ಕೊಡಲು ತೀರ್ಮಾನಿಸಿದ್ದರು. ಆದರೆ ಇಂದು ಮತ್ತೆ ಸಿಎಂ ಡಿ.ಕೆ.ಶಿವಕುಮಾರ್ ವಿಧಾನಸೌಧದಲ್ಲಿನ ಸಭಾಪತಿ ಚೇಂಬರ್‌ಗೆ ಆಗಮಿಸಿ ಮಾತುಕತೆ ನಡೆಸಿದ ಹಿನ್ನೆಲೆಯಲ್ಲಿ ಬಸವರಾಜ ಹೊರಟ್ಟಿ ಅವರು ಇಂದೇ ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ.

**1** ಕೊನೆಗೂ ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ರಾಜೀನಾಮೆ.

**2** ಉಪಸಭಾಪತಿ ಅವರಿಗೆ ರಾಜೀನಾಮೆ ಪತ್ರ ರವಾನಿಸಿದ ಬಸವರಾಜ ಹೊರಟ್ಟಿ.

**3** ಸ್ವ -ಇಚ್ಛೆಯಿಂದ ರಾಜೀನಾಮೆ ನೀಡುತ್ತಿರುವುದಾಗಿ ಬಸವರಾಜ ಹೊರಟ್ಟಿ ಸ್ಪಷ್ಟನೆ.

**ಬಸವರಾಜ ಹೊರಟ್ಟಿ ರಾಜೀನಾಮೆ ಅಂಗೀಕಾರ:** ಸಭಾಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಉಪಸಭಾಪತಿಗಳು ಇಲ್ಲದಿರುವ ಕಾರಣ, ವಿಧಾನಪರಿಷತ್ ಕಾರ್ಯದರ್ಶಿಗಳಿಗೆ ಸಲ್ಲಿಕೆ ಮಾಡಿದ್ದಾರೆ.

ರಾಜೀನಾಮೆ ಪತ್ರ ಸ್ವೀಕರಿಸಿರುವ ವಿಧಾನ ಪರಿಷತ್ತು ಕಾರ್ಯದರ್ಶಿಗಳು, ಸಭಾಪತಿ ಹುದ್ದೆ ತೆರವಾಗಿದೆ ಎಂದು ಅಧಿಸೂಚನೆಯನ್ನೂ ಹೊರಡಿಸಿದ್ದಾರೆ. ನಿಯಮದ ಪ್ರಕಾರ ಯಾವಾಗಲೂ ರಾಜೀನಾಮೆ ಕೊಡುವಾಗ ಉಪಸಭಾಪತಿಗೆ ರಾಜೀನಾಮೆಗೆ ಸಲ್ಲಿಸಬೇಕು. ಉಪಸಭಾಪತಿ ಸ್ಥಾನ ಖಾಲಿ ಇದ್ದರೂ ಉಪಸಭಾಪತಿಗೆ ಸಭಾಪತಿ ರಾಜೀನಾಮೆ ಪತ್ರ ಸಲ್ಲಿಸಬೇಕು. ಅದನ್ನು ಕಾರ್ಯದರ್ಶಿ ರಾಜ್ಯಪಾಲರಿಗೆ ರವಾನಿಸಿ ಅಂಗೀಕಾರ ಪಡೆದುಕೊಳ್ಳುತ್ತಾರೆ.

**ರಾಜೀನಾಮೆ ಕೊಡು ಅಂದರು ಕೊಟ್ಟೆ:** ರಾಜೀನಾಮೆ ಬಳಿಕ ಹೇಳಿಕೆ ನೀಡಿರುವ ಬಸವರಾಜ ಹೊರಟ್ಟಿ, ಇಂದೇ ರಾಜೀನಾಮೆ ಕೊಡಿ ಅಂದರು. ಅದಕ್ಕಾಗಿ ಇಂದೇ ಕೊಟ್ಟೆ ಎಂದು ಹೇಳಿದ್ದಾರೆ. ಈ ಮೊದಲು ಆ.14ರಂದು ರಾಜೀನಾಮೆ ಕೊಡಬೇಕಿತ್ತು. ಇಂದೇ ಕೊಟ್ಟೆ. ಆಗಲೇ ರಾರ್ಜೀನಾಮೆ ಕೊಡಲು ತೀರ್ಮಾನಿಸಿದ್ದೆ. ಸ್ವಲ್ಪ ಬೇಸರ ಆಗಿದೆ. ಅವಧಿ ಮುಗಿಯುವ ಮುನ್ನವೇ ರಾಜೀನಾಮೆ ಪಡೆದಿರುವುದು ಸ್ವಲ್ಪ ಬೇಸರ ಆಗಿದೆ. ಇಲ್ಲಿ ಸರ್ಕಾರದ ಒತ್ತಡ ಅಂತ ಬರಲ್ಲ. ರಾಜೀನಾಮೆ ಕೊಡಬೇಕು ಎಂದು ಹೇಳಿದರು. ಅದಕ್ಕೆ ಕೊಟ್ಟೆ ಎಂದು ರಾಜೀನಾಮೆ ಬಗ್ಗೆ ಸ್ಪಷ್ಟನೆಯನ್ನೂ ಕೊಟ್ಟಿದ್ದಾರೆ. ಸಿಎಂ ಡಿ.ಕೆ.ಶಿವಕುಮಾರ್ ಅವರು ಸಂಪುಟ ಸಚಿವರ ಜೊತೆಗೂಡಿ ಸಭಾಪತಿ ಬಸವರಾಜ ಹೊರಟ್ಟಿಯನ್ನು ಭೇಟಿಯಾಗಿದ್ದರು. ಭೇಟಿ ವೇಳೆ ಸಿಎಂ ಡಿಕೆಶಿ ರಾಜಕೀಯ ವಿದ್ಯಾಮಾನಗಳ ಬಗ್ಗೆ ಚರ್ಚೆ ನಡೆಸಿದ್ದರು . ಜೊತೆಗೆ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮನವಿ ಮಾಡಿದ್ದರು.

**ಕಾಂಗ್ರೆಸ್‌ಗೆ ವಿಧಾನಪರಿಷತ್‌ನಲ್ಲಿ ಬಹುಮತ:** ಇತ್ತೀಚಿಗೆ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯ ನಂತರ ಪರಿಷತ್‌ನಲ್ಲಿ **ಕಾಂಗ್ರೆಸ್** ಬಹುಮತ ಗಳಿಸಿದೆ. ಅಂತೆಯೇ ತನ್ನ ಸದಸ್ಯನನ್ನು ಸಭಾಪತಿಯನ್ನಾಗಿ ನೇಮಿಸಲು ನಿರ್ಧರಿಸಿದ್ದು, ಈಗಾಗಲೇ ಆ ಸ್ಥಾನಕ್ಕೆ ಹಿರಿಯ ಸದಸ್ಯ ಸಲೀಂ ಅಹ್ಮದ್ ಅವರ ಹೆಸರನ್ನು ಅಂತಿಮಗೊಳಿಸಿದೆ.

> ರಾಜೀನಾಮೆ ಬಳಿಕ ಮಾತನಾಡಿದ ಬಸವರಾಜ ಹೊರಟ್ಟಿ ಮಾತನಾಡಿ, 'ಸಭಾಪತಿ ಆಗಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಿದ್ದೇನೆ. ಸಿಎಂ ಸೂಚನೆಯ ಹಿನ್ನೆಲೆ ರಾಜೀನಾಮೆ ನೀಡಿದ್ದೇನೆ. 14ನೇ ತಾರೀಕು ಕೊಡಬೇಕಿತ್ತು, ಇವತ್ತೇ ಕೊಟ್ಟಿದ್ದೇನೆ. ಸಿದ್ದರಾಮಯ್ಯ ಜೊತೆಗೂ ಮಾತನಾಡಿದ್ದೇನೆ. ದಿಢೀರ್ ಆಗಿ ರಾಜೀನಾಮೆ ನೀಡಿದ್ದರಿಂದ ಬೇಸರ ಸಹಜ. ಪರಿಷತ್ ಸದಸ್ಯನಾಗಿ 19 ಮುಖ್ಯಮಂತ್ರಿಗಳ ಆಡಳಿತ ನೋಡಿದ್ದೇನೆ. ಸಭಾಪತಿ ಸ್ಥಾನವನ್ನು ಉತ್ತಮ ರೀತಿಯಲ್ಲಿ ನಿಭಾಯಿಸಿದ್ದೇನೆ. ಎಲ್ಲರೂ ನನ್ನ ಬಗ್ಗೆ ಗೌರವ ತೋರಿಸಿದ್ದಾರೆ. ಎಲ್ಲರಿಗೂ ಅವಕಾಶ ನೀಡಿದ್ದೇನೆ. — ಬಸವರಾಜ ಹೊರಟ್ಟಿ

**ಖಾತೆ ಹಂಚಿಕೆ ವಿಳಂಬ**

ಖಾತೆ ಹಂಚಿಕೆ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದರು. ಸದನಕ್ಕೆ ಸಚಿವರ ತಯಾರಿಗೆ ಅಡ್ಡಿ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, 15ನೇ ತಾರೀಕಿನವರೆಗೂ ಸಮಯವಿದೆ. 13ರಂದು ಸಂತಾಪ ಇದೆ ಮತ್ತು 14ರಂದು ಎಲ್ಲರ ಪರಿಚಯ ಮಾಡುವ ಕಾರ್ಯಕ್ರಮ ಇರುತ್ತದೆ. ಸಚಿವ ಸಂಪುಟದಲ್ಲಿ ಸಣ್ಣ ಬದಲಾವಣೆಗಳು ಇರಲಿದೆ ಎಂದು ಹೇಳಿದರು.

## ಪ್ರತಾಪ ಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಬಿಜೆಪಿ -ಜೆಡಿಎಸ್

ಪ್ರತಾಪ್ ಖರ್ಚಿಯಲ್ಲಿ ಉಪ ಸಭಾಪತಿ ಕುಳಿತಿದ್ದರು. ಇವರನ್ನು ಒತ್ತಾಯಪೂರ್ವಕವಾಗಿ ಕುರ್ಚಿಯಿಂದ ಕೆಳಗಿಳಿಸುವ ಪ್ರಯತ್ನ ನಡೆಸಲಾಗಿತ್ತು. ಬಿಜೆಪಿ ಮತ್ತು ಜೆಡಿಎಸ್ ಅವಿಶ್ವಾಸ ನಿರ್ಣಯ ಮಂಡಿಸಿತ್ತು. ತಾಂತ್ರಿಕವಾಗಿ ಬಹುಮತ ಇಲ್ಲದೆ ಇರುವ ಕಾರಣಕ್ಕಾಗಿ ಮುಂದಿನ ಅಧಿವೇಶನದವರೆಗೆ ಸಮಯ ಇದ್ದರೂ ಪ್ರತಾಪ ಚಂದ್ರ ಶೆಟ್ಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮೂರು ದಿನಗಳ ಹಿಂದೆ ಭಾರತೀಯ ಜನತಾ ಪಕ್ಷದ ನಾಯಕರು ಸ್ವಯಿಚ್ಛೆಯಿಂದ ರಾಜೀನಾಮೆ ನೀಡಲು ಹೊರಟಿದ್ದ ಬಸವರಾಜ್ ಹೊರಟ್ಟಿರವರಿಗೆ ರಾಜೀನಾಮೆ ನೀಡದಂತೆ ಒತ್ತಡವನ್ನು ಹಾಕಿದ್ದರು. ಸಭಾಪತಿ ಸ್ಥಾನವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಪ್ರಯತ್ನಪಟ್ಟಿರುವ ಭಾರತೀಯ ಜನತಾ ಪಕ್ಷದ ನಾಯಕರು ಬೌದ್ಧಿಕವಾಗಿ ದಿವಾಳಿಯಾಗಿರುತ್ತಾರೆ'' ಎಂದಿದ್ದಾರೆ.

## ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಹೊರಟ್ಟಿ: ರಾಜೀನಾಮೆ ಅಂಗೀಕಾರ

- ಹೊರಟ್ಟಿ ರಾಜೀನಾಮೆಗೆ ರಾಜಕೀಯ ಬಣ್ಣ
- ಪ್ರತಾಪ ಚಂದ್ರಶೆಟ್ಟಿ ಘಟನೆ ಉಲ್ಲೇಖಿಸಿ ಬಿಜೆಪಿಗೆ ಕಾಂಗ್ರೆಸ್ ತಿರುಗೇಟು
- ತರಾತುರಿಯಲ್ಲಿ ರಾಜೀನಾಮೆ ಪಡೆದುಕೊಳ್ಳುತ್ತಿರುವ ಉದ್ದೇಶ ಏನೆಂದ ಬಿಜೆಪಿ
- ರಾಜಕೀಯ ಬಣ್ಣವನ್ನು ಪಡೆದುಕೊಳ್ಳುತ್ತಿದೆ ಬಸವರಾಜ ಹೊರಟ್ಟಿ ರಾಜೀನಾಮೆ

**ಅವಧಿ ಮುಗಿಯುವ ಮುನ್ನವೇ ರಾಜೀನಾಮೆ ಪಡೆದಿರುವುದು ಸ್ವಲ್ಪ ಬೇಸರ**



> ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿ ಸ್ಥಾನಕ್ಕೆ ಬಸವರಾಜ್ ಹೊರಟ್ಟಿ ಅವರು ರಾಜೀನಾಮೆ ನೀಡಿರುವ ನಿರ್ಧಾರವನ್ನು ಗೌರವಿಸುತ್ತೇನೆ. ಸುಧೀರ್ಘ ಸಾರ್ವಜನಿಕ ಹಾಗೂ ಸಂಸದೀಯ ಜೀವನದಲ್ಲಿ ವಿಧಾನಪರಿಷತ್ತಿನ ಘನತೆ, ಗೌರವ ಮತ್ತು ಸಂಸದೀಯ ಪರಂಪರೆಯನ್ನು ಎತ್ತಿಹಿಡಿದ ಹಿರಿಯ ನಾಯಕರು ಹೊರಟ್ಟಿ.
>
> ಸಭಾಪತಿಯಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಪಕ್ಷಾತೀತ ನಿಲುವು ಕಾಯ್ದುಕೊಂಡು, ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ಕಲ್ಪಿಸುವ ಮೂಲಕ ಸದನವನ್ನು ಸಂಯಮ ಮತ್ತು ಮುತ್ಸದ್ದಿತನದಿಂದ ಮುನ್ನಡೆಸಿದ ಅವರ ಕಾರ್ಯವೈಖರಿ ಸ್ಮರಣೀಯವಾದದ್ದು. — ಬಿಕೆ ಹರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷ




**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,989 /Gram 24ct ₹ 13,740/Gram 22ct ಬೆಳ್ಳಿ: ₹235.00/

# ಹೊಸೂರು ಬೊಮ್ಮಸಂದ್ರ ಮೆಟ್ರೋ ಯೋಜನೆ: ವೈಜ್ಞಾನಿಕ ಅಧ್ಯಯನಕ್ಕೆ ತಜ್ಞರ ಒತ್ತಾಯ

• ಉದಯವಾಹಿನಿ, ಬೆಂಗಳೂರು

ತಮಿಳುನಾಡು ಸರ್ಕಾರವು ಹೊಸೂರು ಮತ್ತು ಬೊಮ್ಮಸಂದ್ರ ನಡುವೆ ಮೆಟ್ರೋ ಸಂಪರ್ಕ ಕಲ್ಪಿಸುವ ಯೋಜನೆಗೆ ಮುಂದಾಗಿರುವ ಬೆನ್ನಲ್ಲೇ, ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಬಲಪಡಿಸುವ ಪ್ರಯತ್ನವನ್ನು ಸಾರಿಗೆ ತಜ್ಞರು ಸ್ವಾಗತಿಸಿದ್ದಾರೆ. ಆದರೆ, ಪ್ರಯಾಣಿಕರ ಬೇಡಿಕೆಯನ್ನು ಪರಿಗಣಿಸದೆ ಮುಂಚಿತವಾಗಿಯೇ ಮೆಟ್ರೋ ವ್ಯವಸ್ಥೆ ಆಯ್ಕೆ ಮಾಡುವುದು ವೈಜ್ಞಾನಿಕ ವಿಧಾನವಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಸುಮಾರು 23 ಕಿ.ಮೀ. ಉದ್ದದ ಈ ಮಾರ್ಗಕ್ಕೆ ಸಂಬಂಧಿಸಿದ ವಿವರವಾದ ಕಾರ್ಯಸಾಧ್ಯತಾ ವರದಿ ಅಂತಿಮ ಹಂತದಲ್ಲಿದ್ದು, ಹೊಸೂರನ್ನು ಬೆಂಗಳೂರಿನ


ಉದಯವಾಹಿನಿ ಚಿತ್ರ

ಮೆಟ್ರೋ ಜಾಲಕ್ಕೆ ಸಂಪರ್ಕಿಸುವ ಉದ್ದೇಶ ಹೊಂದಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ ಪ್ರೊ. ಆಶಿಷ್ ವರ್ಮಾ, ಕಾರ್ಯಸಾಧ್ಯತಾ ಅಧ್ಯಯನವು ಪ್ರತಿ ಗಂಟೆಗೆ ಪ್ರತಿ ದಿಕ್ಕಿನಲ್ಲಿ ಎಷ್ಟು ಪ್ರಯಾಣಿಕರ ಬೇಡಿಕೆ ಇದೆ, ಗರಿಷ್ಠ ದಟ್ಟಣೆ ಇರುವ ಭಾಗಗಳು ಯಾವುವು ಎಂಬುದನ್ನು ಮೊದಲು ನಿರ್ಧರಿಸಬೇಕು. ಅದರ ಆಧಾರದ ಮೇಲೆ ಮೆಟ್ರೋ, ಮೆಟ್ರೋ ಲೈಟ್, ಉಪನಗರ ರೈಲು ಅಥವಾ ಪ್ರಾದೇಶಿಕ ವೇಗದ ಸಾರಿಗೆ ವ್ಯವಸ್ಥೆ ಯಾವುದು ಸೂಕ್ತ ಎಂಬುದನ್ನು ತೀರ್ಮಾನಿಸಬೇಕು ಎಂದು ಹೇಳಿದರು. ಪ್ರಮುಖ ವಾಣಿಜ್ಯ ಕೇಂದ್ರಗಳ ನಡುವೆ ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಬಲಪಡಿಸುವುದು ಸ್ವಾಗತಾರ್ಹ. ಆದರೆ ಮೊದಲು ಮೆಟ್ರೋ ನಿರ್ಮಿಸುವ ನಿರ್ಧಾರ ತೆಗೆದುಕೊಂಡು ನಂತರ ಕಾರ್ಯಸಾಧ್ಯತಾ ಅಧ್ಯಯನ ನಡೆಸುವುದು ವೈಜ್ಞಾನಿಕ ವಿಧಾನವಲ್ಲ. ಪ್ರಯಾಣಿಕರ ಬೇಡಿಕೆಯೇ ಯಾವ ಸಾರಿಗೆ ವ್ಯವಸ್ಥೆ ಸೂಕ್ತ ಎಂಬುದನ್ನು ನಿರ್ಧರಿಸಬೇಕು ಎಂದು ಹೇಳಿದರು.

# ಹೆಬ್ಬಾಳ ಸುರಂಗ ರಸ್ತೆ ಯೋಜನೆ: 10 ದಿನಗಳೊಳಗೆ ಸರ್ಕಾರದ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳ ಮೇಲ್ಸೇತುವೆ ಜಂಕ್ಷನ್‌ನಿಂದ ಜಿಕೆವಿಕೆ ಆವರಣದ ಮೂಲಕ ಪಶುವೈದ್ಯಕೀಯ ಕಾಲೇಜಿಗೆ ಸಂಪರ್ಕ ಕಲ್ಪಿಸುವ ಬಹುಕೋಟಿ ವೆಚ್ಚದ ಮೂರು ಪಥಗಳ ದ್ವಿಮುಖ ವಾಹನ ಅಂಡರ್‌ಪಾಸ್ ಯೋಜನೆಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಯೋಜನೆ ಕುರಿತು ಎತ್ತಲಾಗಿರುವ ಪ್ರಶ್ನೆಗಳಿಗೆ ಉತ್ತರಿಸುವ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಹಾಗೂ ನ್ಯಾಯಮೂರ್ತಿ ಕೆ ಎಸ್ ಹೇಮಲೇಖ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿತು.

ಯೋಜನೆಯಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮದ ಕುರಿತು ಯಾವುದೇ ಅಧ್ಯಯನ ನಡೆಸಲಾಗಿದೆಯೇ, ವಿಶೇಷವಾಗಿ ಹೆಬ್ಬಾಳ ಕೆರೆಗೆ ನೀರಿನ ಒಳಹರಿವು ಮತ್ತು ಹೊರಹರಿವು ಅಡ್ಡಿಯಾಗುತ್ತದೆಯೇ, ನೈಸರ್ಗಿಕ ಜಲಮಾರ್ಗಗಳಿಗೆ ತೊಂದರೆಯಾಗುತ್ತದೆಯೇ ಎಂಬ ವಿವರಗಳನ್ನು ದಾಖಲಾತಿಗಳೊಂದಿಗೆ 10 ದಿನಗಳೊಳಗೆ ಪ್ರಮಾಣಪತ್ರದ ಮೂಲಕ ಸಲ್ಲಿಸುವಂತೆ ನ್ಯಾಯಾಲಯ ಸೂಚಿಸಿದೆ.

ಈ ಕುರಿತು ಗುರುಪ್ರಸಾದ್ ಆರ್.ಕೆ. ರಿಷ್ವಾಂಜಸ್ ರಾಘವನ್ ಹಾಗೂ ಎಲಿಜಬೆತ್ ಸೌಮ್ಯ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಪೀಠವು ರಾಜ್ಯ ಸರ್ಕಾರ ಹಾಗೂ ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದೆ. ನಿಗದಿತ ಅವಧಿಯೊಳಗೆ ಸರ್ಕಾರ ಪ್ರಮಾಣಪತ್ರ ಸಲ್ಲಿಸದೆ, ಮುಂದೂಡಿಕೆ ಕೋರಿ ವಿಳಂಬ ಮಾಡಿದರೆ ಯೋಜನೆಗೆ ತಡೆ ನೀಡಲಾಗುವುದು ಎಂದು ನ್ಯಾಯಾಲಯ ಮೌಖಿಕವಾಗಿ ಎಚ್ಚರಿಕೆ ನೀಡಿತು.

# ಸ್ಟಾಕ್ ಮಾರ್ಕೆಟ್ ಹೆಸರಲ್ಲಿ ಲಕ್ಷಾಂತರ ರೂ ವಂಚನೆ; ಪ್ರಶ್ನಿಸಿದ ಕನ್ನಡಿಗರಿಗೆ ಅಪಮಾನ!

• ಉದಯವಾಹಿನಿ, ಬೆಂಗಳೂರು

ಸ್ಟಾಕ್ ಮಾರ್ಕೆಟ್ ಹೆಸರಲ್ಲಿ ಲಕ್ಷಾಂತರ ರೂಪಾಯಿ ವಂಚನೆ ಹಗರಣ ಬೆಳಕಿಗೆ ಬಂದಿದ್ದು, ಇದನ್ನು ಪ್ರಶ್ನಿಸಿದ ಕನ್ನಡಿಗನಿಗೆ ಅದರ ಮಾಲಕಿ ಹೀನಾಮಾನ ಬೈದಿರುವ ಘಟನೆ ವರದಿಯಾಗಿದೆ.

ಹೌದು.. ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡುವ ನೆಪದಲ್ಲಿ ಸಾರ್ವಜನಿಕರಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಗಂಭೀರ ಆರೋಪವೊಂದು ಕೇಳಿಬಂದಿದೆ. ಇದರ ಬೆನ್ನಲ್ಲೇ, ವಂಚನೆ ಬಗ್ಗೆ ಪ್ರಶ್ನಿಸಲು ಹೋದ ಹೂಡಿಕೆದಾರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕನ್ನಡ ಭಾಷೆಯ ಕುರಿತು ಉದ್ಧಟತನ ಪ್ರದರ್ಶಿಸಿದ್ದ ಮಹಿಳೆಯೊಬ್ಬಳು ಕೊನೆಗೆ ಪೊಲೀಸ್ ಠಾಣೆಯ ಮುಂಭಾಗದಲ್ಲೇ ಕನ್ನಡಿಗರ ಕ್ಷಮೆ ಕೋರಿದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬೆಂಗಳೂರಿನ ಪೀಣ್ಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಕಂಪನಿಯಿಂದ ವಂಚನೆಗೊಳಗಾದ ಹಲವಾರು ಹೂಡಿಕೆದಾರರು ಒಟ್ಟಾಗಿ ಸಂಸ್ಥೆಯ ಪ್ರತಿನಿಧಿಗಳನ್ನು ಪ್ರಶ್ನಿಸಲು ತೆರಳಿದ್ದರು. ಈ ವೇಳೆ ಅಲ್ಲಿಯೇ ಇದ್ದ ಪ್ರಿಯಾಂಕ ಎಂಬ ಮಹಿಳೆ ಹೂಡಿಕೆದಾರರೊಂದಿಗೆ ತೀವ್ರ ಗಲಾಟೆ ಆರಂಭಿಸಿದ್ದಾಳೆ.

ಸಂತ್ರಸ್ತರು ಆಕೆಗೆ ''ಕನ್ನಡದಲ್ಲಿ ಮಾತನಾಡು'' ಎಂದು ಹೇಳಿದ್ದಕ್ಕೆ ಆಕೆ ತೀವ್ರವಾಗಿ ಆಕ್ರೋಶಗೊಂಡಿದ್ದಾಳೆ. ಅಲ್ಲದೆ, ''ನನಗೆ ಕನ್ನಡ ಗೊತ್ತಿಲ್ಲ,ಏನ್ ಮಾಡ್ತಿರಾ ಮಾಡ್ಕೊಳಿ'' ಎಂದು ಅತ್ಯಂತ ಅಸಭ್ಯ ಹಾಗೂ ಅವಾಚ್ಯ ಪದಗಳನ್ನು ಬಳಸಿ ಕನ್ನಡಿಗರನ್ನು ನಿಂದಿಸಿದ್ದಾಳೆ. ಮಹಿಳೆಯ ಈ ಉದ್ಧಟತನ ಮತ್ತು ಸ್ಥಳದಲ್ಲಿ ನಡೆಯುತ್ತಿದ್ದ ಗಲಾಟೆಯನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ಪೀಣ್ಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ.

# ಹೋಟೆಲ್‌ಗಳ ಮೇಲೆ ಕರ್ನಾಟಕ ಆರೋಗ್ಯ ಇಲಾಖೆ ದಿಢೀರ್ ದಾಳಿ,!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಆಹಾರ ಸುರಕ್ಷತೆ ಕುರಿತು ದಾಖಲಾದ ದೂರುಗಳ ಹಿನ್ನೆಲೆಯಲ್ಲಿ ಕರ್ನಾಟಕ ಆರೋಗ್ಯ ಇಲಾಖೆ ಇಂದು ಹೋಟೆಲ್‌ಗಳ ತಪಾಸಣೆಗೆ ಮುಂದಾಗಿದ್ದು, ಇದಕ್ಕಾಗಿ 30 ವಿಶೇಷ ತಂಡಗಳ ರಚನೆ ಮಾಡಿದೆ.ಕಳಪೆ ಆಹಾರ ಗುಣಮಟ್ಟ, ಸ್ವಚ್ಛತೆ ಕೊರತೆ ಹಾಗೂ ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆ ಕುರಿತು ದೂರುಗಳು ಹೆಚ್ಚಾದ ಹಿನ್ನೆಲೆಯಲ್ಲಿ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಆಹಾರ ಮಳಿಗೆಗಳ ಮೇಲೆ ದಿಢೀರ್ ತಪಾಸಣೆ ನಡೆಸಲು 30 ವಿಶೇಷ ತಂಡಗಳನ್ನು ರಚಿಸಿದೆ.ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರ ಸೂಚನೆ ಮೇರೆಗೆ ಈ ಕಾರ್ಯಾಚರಣೆ ಆರಂಭಿಸಲಾಗಿದೆ. ವಿವಿಧ ಹೋಟೆಲ್‌ಗಳಲ್ಲಿ ಅಸ್ವಚ್ಛತೆ ಹಾಗೂ ಗುಣಮಟ್ಟವಿಲ್ಲದ ಆಹಾರ ಮಾರಾಟ ಮಾಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರುಗಳು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ದೂರುಗಳೂ ಸೇರಿದಂತೆ, ಇಲಾಖೆಗೆ ಬಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ರೆಸ್ಟೋರೆಂಟ್, ಹೋಟೆಲ್ ಹಾಗೂ ಇತರ ಆಹಾರ ಸಂಸ್ಥೆಗಳಲ್ಲಿ ಆಹಾರ ಸುರಕ್ಷತಾ ನಿಯಮ ಉಲ್ಲಂಘನೆ ಕುರಿತು ಪದೇಪದೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ತಪಾಸಣೆಯನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ ಎಂದು ಆಹಾರ ಸುರಕ್ಷತಾ ಅಧಿಕಾರಿ

ಶ್ರೀನಿವಾಸ್ ತಿಳಿಸಿದ್ದಾರೆ. ಅಧಿಕಾರಿಗಳ ಪ್ರಕಾರ, 30 ವಿಶೇಷ ತಂಡಗಳಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಅಧಿಕಾರಿಗಳು ಇರಲಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ದಿಢೀರ್ ತಪಾಸಣೆ ನಡೆಸಲಿದ್ದಾರೆ.

# ಸಿಇಟಿ ಅಭ್ಯರ್ಥಿಗಳಿಗೆ ಹೊಸದಾಗಿ ಆಪ್ಷನ್ಸ್ ದಾಖಲಿಸಲು ಅವಕಾಶ : ಕೆಇಎ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಫಾರ್ಮಸಿ ಕೋರ್ಸ್ ಗಳ ಪ್ರವೇಶಕ್ಕೆ ಇಚ್ಛೆ/ಆಯ್ಕೆಗಳನ್ನು (ಆಪ್ಷನ್ಸ್) ದಾಖಲಿಸುವ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆರಂಭಿಸಿದೆ. ಇಂಜಿನಿಯರಿಂಗ್ ಇತ್ಯಾದಿ ಸಿಇಟಿ ಕೋರ್ಸ್ ಗಳ ಪ್ರವೇಶಕ್ಕೆ ಆಪ್ಷನ್ಸ್ ದಾಖಲಿಸಿದ್ದ ಅಭ್ಯರ್ಥಿಗಳು ಕೂಡ ಈಗ ಹೊಸದಾಗಿ ಆಪ್ಷನ್ಸ್ ದಾಖಲಿಸಲು/ಮಾರ್ಪಡಿಸಲು/ತೆಗೆದು ಹಾಕುವುದಕ್ಕೂ ಇದೇ ಮೊದಲ ಬಾರಿಗೆ ಅವಕಾಶ ನೀಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಆದ್ಯತಾ ಕ್ರಮದಲ್ಲಿ ಆಗಸ್ಟ್ 13ರವರೆಗೆ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಫಾರ್ಮಸಿ ಕೋರ್ಸ್ ಗಳ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ್ದು, ಅದನ್ನು ನೋಡಿಯೇ ಎಚ್ಚರಿಕೆಯಿಂದ ಆಪ್ಷನ್ಸ್ ದಾಖಲಿಸಬೇಕು.

# ಕೆಂಪೇಗೌಡ ವಿಮಾನ ನಿಲ್ದಾಣಕೋಝಿಕ್ಕೋಡ್ ನಡುವೆ ಆಗಸ್ಟ್ 15ರಿಂದ ಅ ಫ್ಲೈಬಸ್ ಸೇವೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಆಗಸ್ಟ್ 15ರಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಕೋಝಿಕ್ಕೋಡ್ ನಡುವೆ ಹೊಸ ಫ್ಲೈಬಸ್ ಸೇವೆಯನ್ನು ಆರಂಭಿಸಲಿದೆ. ಪ್ರತಿದಿನ ಎರಡು ಬಸ್‌ಗಳು ಸಂಚರಿಸಲಿದ್ದು, ಯಲಹಂಕ, ಹೆಬ್ಬಾಳ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣ, ಮೈಸೂರು, ಹುಣಸೂರು, ಗೋಣಿಕೊಪ್ಪ, ಪೊನ್ನಂಪೇಟೆ, ಕುಟ್ಟ, ಮಾನಂತವಾಡಿ ಮತ್ತು ಕಲ್ಪೆಟ್ಟ ಮಾರ್ಗವಾಗಿ ಕೋಝಿಕ್ಕೋಡ್ ಗೆ ತೆರಳಲಿವೆ. ಮತ್ತೊಂದು ಬಸ್ ಬೆಳಿಗ್ಗೆ 4.15ಕ್ಕೆ ಹೊರಟು ಸಂಜೆ 7.30ಕ್ಕೆ ಕೋಝಿಕ್ಕೋಡ್ ತಲುಪಲಿದೆ. ಪ್ರಯಾಣ ದರವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ ಮೈಸೂರು 960 ರೂ ಗೋಣಿಕೊಪ್ಪ 1,200 ರೂ ಮಾನಂತವಾಡಿ 1,350 ರೂ ಕಲ್ಪೆಟ್ಟ 1,400 ರೂ ಕೋಝಿಕ್ಕೋಡ್ 1,500 ರೂ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

# ಬೆಂಗಳೂರಿನಲ್ಲಿ ಲಾಲ್ ಬಾಗ್ ಮಾದರಿ 3 ಉದ್ಯಾನ ನಿರ್ಮಾಣಕ್ಕೆ ಚಿಂತನೆ

## ರಕ್ಷಣಾ ಇಲಾಖೆ ಜಾಗದಲ್ಲಿ ಇಂತಹ ಉದ್ಯಾನ ನಿರ್ಮಾಣ ಮಾಡುವ ಉದ್ದೇಶವಿದೆ. ಈ ಭೂಮಿ ರಕ್ಷಣಾ ಇಲಾಖೆ ವಶದಲ್ಲೇ ಇರುತ್ತದೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಲಾಲ್ ಬಾಗ್ ಮಾದರಿಯ 3 ಉದ್ಯಾನ ನಿರ್ಮಾಣ ಮಾಡಲು ನಮ್ಮ ಸರ್ಕಾರ ಚಿಂತನೆ ನಡೆಸಿದೆ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಲಾಲ್ ಬಾಗ್‌ನಲ್ಲಿ 'ಗಂಗ ಸಾಮ್ರಾಜ್ಯ ವೈಭವ' ಪರಿಕಲ್ಪನೆಯಲ್ಲಿ ಆಯೋಜಿಸಲಾಗಿರುವ 220ನೇ ಫಲಪುಷ್ಪ ಪ್ರದರ್ಶನಕ್ಕೆ ಶಿವಕುಮಾರ್ ಅವರು ಚಾಲನೆ ನೀಡಿ, ಮಾಧ್ಯಮಗಳೊಂದಿಗೆ ಮಾತನಾಡಿದರು.

ಬೆಂಗಳೂರಿನಲ್ಲಿರುವ ರಕ್ಷಣಾ ಇಲಾಖೆ ಜಾಗದಲ್ಲಿ ಇಂತಹ ಉದ್ಯಾನ ನಿರ್ಮಾಣ ಮಾಡುವ ಉದ್ದೇಶವಿದೆ. ಈ ಭೂಮಿ ರಕ್ಷಣಾ ಇಲಾಖೆ ವಶದಲ್ಲೇ ಇರುತ್ತದೆ. ಆದರೆ ಅಲ್ಲಿ ಇಂತಹ ಉದ್ಯಾನ ನಿರ್ಮಿಸಲು ಅನುಮತಿ ಬೇಕು ಎಂದು ಪತ್ರ ಬರೆದಿದ್ದು, ಸಧ್ಯದಲ್ಲೇ ರಕ್ಷಣಾ ಸಚಿವರನ್ನು ಭೇಟಿ ಮಾಡುತ್ತೇನೆ.

ವಾರಣಾಸಿಯಲ್ಲಿ ರಕ್ಷಣಾ ಇಲಾಖೆ ಜಾಗದಲ್ಲಿ ಉದ್ಯಾನ ನಿರ್ಮಿಸಲು ಪ್ರಧಾನಮಂತ್ರಿಗಳು ಅನುಮತಿ ನೀಡಿದ್ದಾರೆ. ಇದರ ಜೊತೆಗೆ ಬೆಂಗಳೂರು ನಗರದೊಳಗೆ ಇರುವ ಅರಣ್ಯ ಜಾಗದಲ್ಲಿ ಇಂತಹ ಉದ್ಯಾನವನ ನಿರ್ಮಿಸಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ. ಜಿಬಿಎ, ಬಿಡಿಎ, ತೋಟಗಾರಿಕೆ ಇಲಾಖೆ ಸೇರಿದಂತೆ ಇತರ ಇಲಾಖೆಗಳಿಗೆ ಜವಾಬ್ದಾರಿ ವಹಿಸಿ ನಿರ್ಮಿಸಲು ಆಲೋಚಿಸಿದ್ದೇವೆ. ನಮ್ಮ ಕಾಲದಲ್ಲಿ ನಗರದ ಹಸಿರು ಕಾಪಾಡಿ, ಸಾರ್ವಜನಿಕರ ಬದುಕಿಗೆ ಅನುಕೂಲ ಮಾಡಿಕೊಡಲು ಮುಂದಾಗಿದ್ದೇವೆ'' ಎಂದು ತಿಳಿಸಿದರು.

ಲಾಲ್ ಬಾಗ್ ಕೇವಲ ಉದ್ಯಾನವನ ಮಾತ್ರವಲ್ಲ. ಇದೊಂದು ಇತಿಹಾಸ. ಗಂಗ ಸಾಮ್ರಾಜ್ಯದಲ್ಲಿ ಕೃಷಿಕರು, ರೈತರ ಇತಿಹಾಸವನ್ನು ಇಟ್ಟುಕೊಂಡು ಈ ಫಲಪುಷ್ಪ ಪ್ರದರ್ಶನವನ್ನು ರೂಪಿಸಲಾಗಿದೆ. ಗಂಗರು ಆಗಿನ ಕಾಲದಲ್ಲಿ ಕಟ್ಟಿದ್ದ ಕೆರೆಗಳು ಇಂದಿಗೂ ಉಳಿದಿವೆ.

ಕಷ್ಟಕಾಲದಲ್ಲಿ ಆ ಕೆರೆಗಳು ರಕ್ಷಣೆ ಮಾಡಿವೆ. ಗಂಗರ ಇತಿಹಾಸ ಸಮಾನತೆ, ಕೃಷಿಕರ ಬದುಕು, ಹೋರಾಟವನ್ನು ಹೊಂದಿದೆ. ಇದು ನಮ್ಮ ಸಂಸ್ಕೃತಿ, ರೈತರ ಬದುಕು ಹಾಗೂ ಕಲೆಯ ಸಂಭ್ರಮ. ಈ ವರ್ಷದ ಸ್ವಾತಂತ್ರ್ಯ ಸಂಭ್ರಮದಲ್ಲಿ ನಾಡಿನ ಜನತೆ ಈ ಫಲಪುಷ್ಪ ಪ್ರದರ್ಶನ ವೀಕ್ಷಿಸಿ ಆನಂದಿಸಬೇಕು.

ಯುವಕರು, ಮಹಿಳೆಯರು, ಹಿರಿಯರು ಸೇರಿದಂತೆ ಎಲ್ಲರೂ ಈ ಪ್ರದರ್ಶನವನ್ನು ಕಣ್ತುಂಬಿಕೊಳ್ಳಬೇಕು ಎಂದು ಮನವಿ ಮಾಡುತ್ತೇನೆ. ಈ ಕಾರ್ಯಕ್ರಮವನ್ನು ನಾನು ಉದ್ಘಾಟಿಸಿರುವುದು ಸಂತೋಷ ತಂದಿದೆ. 10 ದಿನಗಳ ಕಾಲ ಈ ಪ್ರದರ್ಶನ ನಡೆಯಲಿದೆ. ಲಾಲ್ ಬಾಗ್ ಅನ್ನು ಹೈದರಾಲಿ ಸ್ಥಾಪಿಸಿದರು, ಬ್ರಿಟೀಷರು ಅಭಿವೃದ್ಧಿ ಮಾಡಿದರು. ಈಗ ಕರ್ನಾಟಕ ಸರ್ಕಾರ ಮುಂದುವರಿಸುತ್ತಿದೆ'' ಎಂದು ತಿಳಿಸಿದರು.

''ರಾಜ್ಯದಲ್ಲಿ ಹಸಿರು ಹೆಚ್ಚಿಸಿ ರೈತರ ಬದುಕು ಕಾಪಾಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿದ್ದೇವೆ. ಇದು ರೈತರು ಹಾಗೂ ಸರ್ಕಾರದ ನಡುವಿನ ಪಾಲುದಾರಿಕೆಯ ಕಾರ್ಯಕ್ರಮವಾಗಿದೆ. ಇದನ್ನು ಆಗಸ್ಟ್ 15ರಂದು ಪ್ರಕಟಿಸುತ್ತೇವೆ. ಸರ್ಕಾರದ 100 ದಿನಗಳ ಕಾರ್ಯಕ್ರಮ ರೂಪಿಸಲಾಗಿದ್ದು, ರೈತರ ಬದುಕಿಗೆ ಯಾವ ರೀತಿ ಶಕ್ತಿ ತುಂಬಬೇಕು ಎಂದು ಆಲೋಚಿಸಿ ಕಾರ್ಯಕ್ರಮ ರೂಪಿಸುತ್ತಿದ್ದೇವೆ'' ಎಂದು ತಿಳಿಸಿದರು.

ಕಾಂಗ್ರೆಸ್ ಹಿರಿಯ ನಾಯಕರ ಮನೆಗೆ ಭೇಟಿ ನೀಡಿದ್ದು ಸಮಸ್ಯೆ ಬಗೆಹರಿಸಲಾಗಿದೆಯೇ ಎಂದು ಕೇಳಿದಾಗ, ''ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಸಮಸ್ಯೆ ಇರುವುದು ಮಾಧ್ಯಮಗಳಲ್ಲಿ. ನಮ್ಮ ಹಿರಿಯ ನಾಯಕರ ಭಾವನೆಗೆ ನಾವು ಗೌರವ ಸಲ್ಲಿಸಬೇಕು.


ಉದಯವಾಹಿನಿ ಚಿತ್ರ

140 ಶಾಸಕರು ಹಾಗೂ 40 ಪರಿಷತ್ ಸದಸ್ಯರಿದ್ದು, ಆ ಪೈಕಿ ನಾವು ಸಚಿವ ಸ್ಥಾನ ನೀಡಲು ಸಾಧ್ಯವಿರುವುದು ಕೇವಲ 33 ಜನರಿಗೆ ಮಾತ್ರ. ನಮ್ಮ ಪಕ್ಷದಲ್ಲಿ ಎಲ್ಲರೂ ಅರ್ಹರೆ. ನಾವು ಅವರ ಆಸೆ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಪ್ರಾಮಾಣಿಕರಾಗಿದ್ದು, ಎಲ್ಲರೂ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ'' ಎಂದು ತಿಳಿಸಿದರು.

### ಸಂಸ್ಕೃತಿ ಎಲ್ಲವೂ ಇಲ್ಲಿ ಅನಾವರಣ

ಈ ವರ್ಷ ಗಂಗ ಸಾಮ್ರಾಜ್ಯ ರೂಪುಗೊಂಡಿದೆ. ದಕ್ಷಿಣ ಭಾರತದ ಗಂಗರ ಸಾಮ್ರಾಜ್ಯದ ವೈಭವವನ್ನು ಪುಷ್ಪಗಳ ಮೂಲಕ ಮೂಡಿಸಲಾಗಿದೆ. ಅವರ ಹೋರಾಟ, ಸಂಸ್ಕೃತಿ ಎಲ್ಲವೂ ಇಲ್ಲಿ ಅನಾವರಣಗೊಂಡಿದೆ. ಗಂಗರ ಇತಿಹಾಸ ಕರ್ನಾಟಕ ರಾಜ್ಯದ ಇತಿಹಾಸದ ಭಾಗ. ತೋಟಗಾರಿಕಾ ಇಲಾಖೆಯವರು ಈ ಪರಿಕಲ್ಪನೆಯನ್ನು ಅತ್ಯುತ್ತಮವಾಗಿ ರೂಪಿಸಿದ್ದಾರೆ ಎಂದು ಹೇಳಿದರು.

## 2 ಲಕ್ಷ ಮಂದಿಗೆ ಕೃತಕ ಬುದ್ಧಿಮತ್ತೆ ತರಬೇತಿ

ಕರ್ನಾಟಕ ಸರ್ಕಾರವು ಪ್ರಸ್ತಾವಿತ ಎಐ ವಿಶ್ವವಿದ್ಯಾಲಯ ಆರಂಭಕ್ಕೂ ಮುನ್ನ ರಾಜ್ಯದಲ್ಲಿ ಸುಮಾರು ಎರಡು ಲಕ್ಷ ಮಂದಿಗೆ ಕೃತಕ ಬುದ್ಧಿಮತ್ತೆ ತರಬೇತಿ ನೀಡುವ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಕೈಗಾರಿಕಾ ಬೆಂಬಲಿತ ಪ್ರಮಾಣಪತ್ರ ಕಾರ್ಯಕ್ರಮಗಳನ್ನು ಜಂಟಿಯಾಗಿ ರೂಪಿಸಲು ಎಐ ಸಂಸ್ಥೆ ಸಹಕಾರ ಕೋರಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಂಥ್ರೋಪಿಕ್ ಸಂಸ್ಥೆಯ ಅಂತಾರಾಷ್ಟ್ರೀಯ ನೀತಿ ವಿಭಾಗದ ಮುಖ್ಯಸ್ಥ ಮೈಕೆಲ್ ಸೆಲ್ಲಿಟ್ಟೊ ನೇತೃತ್ವದ ನಿಯೋಗದೊಂದಿಗೆ ನಡೆದ ಸಭೆಯಲ್ಲಿ ಈ ಪ್ರಸ್ತಾವನೆ ಮಂಡಿಸಿದರು. ಪ್ರಮಾಣಪತ್ರ ಕೋರ್ಸ್‌ಗಳಿಗೆ ಪಠ್ಯಕ್ರಮ ರೂಪಿಸುವುದು, ಬೋಧನಾ ವಿಷಯ ಸಿದ್ಧಪಡಿಸುವುದು ಹಾಗೂ ಮೌಲ್ಯಮಾಪನ ಚೌಕಟ್ಟು ಅಭಿವೃದ್ಧಿಪಡಿಸುವಲ್ಲಿ ಸಂಸ್ಥೆ ಸಹಕರಿಸುವಂತೆ ಅವರು ಮನವಿ ಮಾಡಿದರು. ಸಭೆಯನ್ನು ಆಯೋಜಿಸಿದ್ದ ಎಲೆಕ್ಟ್ರಾನಿಕ್ಸ್, ಐಟಿ/ಬಿಟಿ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಆಂಥ್ರೋಪಿಕ್ ಜೊತೆಗಿನ ಸಹಭಾಗಿತ್ವದಿಂದ ಕರ್ನಾಟಕದಲ್ಲಿ ಎಐ ಶಿಕ್ಷಣವನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

## MLC ಯಾಗಿ ಗಾಯತ್ರಿ ಶಾಂತೇಗೌಡ ಪ್ರಮಾಣ ವಚನ ಸ್ವೀಕಾರ

ವಿಧಾನಪರಿಷತ್‌ಸದಸ್ಯರಾಗಿಗಾಯತ್ರಿಶಾಂತೇಗೌಡಶುಕ್ರವಾರ ಅಧಿಕಾರಸ್ವೀಕರಿಸಿದ್ದಾರೆ.ಸಭಾಪತಿಬಸವರಾಜಹೊರಟ್ಟಿ ಕೊಠಡಿಯಲ್ಲಿಇಂದುಬೆಳಗ್ಗೆನಡೆದಕಾರ್ಯಕ್ರಮದಲ್ಲಿ ಭಗವಂತನಹೆಸರಿನಲ್ಲಿಪ್ರಮಾಣವಚನಸ್ವೀಕರಿಸಿದರು. ಸಿಎಂ ಡಿ ಕೆ ಶಿವಕುಮಾರ್ ಉಪಸ್ಥಿತರಿದ್ದರು.

ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಬಳಿಕ ಸಭಾಪತಿಹೊರಟ್ಟಿಯವರನ್ನುಸಿಎಂಡಿಕೆಶಿವಕುಮಾರ್, ಸಚಿವ ನರೇಂದ್ರ ಸ್ವಾಮಿ ಹಾಗೂ ಸಲೀಂ ಅಹ್ಮದ್ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಗಾಯತ್ರಿ ಶಾಂತೇಗೌಡ ಅವರು ಸಚಿವಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆಎಂದುನಿರೀಕ್ಷಿಸಲಾಗಿದ್ದರೂ, ಕೊನೆಯಕ್ಷಣದಲ್ಲಿಅವರಹೆಸರನ್ನುಕೈಬಿಡಲಾಗಿತ್ತು. ಎಂಎಲ್‌ಸಿಯಾಗಿಪ್ರಮಾಣವಚನಸ್ವೀಕರಿಸಿದಬಳಿಕ, ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ಸ್ಪಷ್ಟನೆ ಸಿಗುವ ಸಾಧ್ಯತೆಯಿದೆ.

# ಪದ ಬದಲಾದರೂ ನಿಮ್ಮ ಸಿದ್ಧಾಂತ ಬದಲಾಗುವುದಿಲ್ಲ ಖರ್ಗೆ ಟಾಂಗ್

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಬಿಜೆಪಿ ತಮ್ಮ ಭಾಷೆ ಮತ್ತು ಪದಗಳನ್ನು ಬದಲಾಯಿಸುತ್ತಿದ್ದರೂ ಅವರ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಆಗಿಲ್ಲ, ಹೊಸ ಪದಗಳನ್ನು ಬಳಸುವುದರಿಂದ ಅವರ ಮೂಲ ಸಿದ್ಧಾಂತ ಬದಲಾಗುವುದಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಟೀಕೆ ಮಾಡಿದ್ದಾರೆ. ಮುಂಬೈಯ ನೀತಾ ಮುಕೇಶ್ ಅಂಬಾನಿ ಸಾಂಸ್ಕೃತಿಕ ಕೇಂದ್ರದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು, ಜನರೇಷನ್ ಝಡ್ ಮತ್ತು ಜನರೇಷನ್ ಆಲ್ಫಾ ಯುವಕರೊಂದಿಗೆ ಸಂವಾದ ನಡೆಸಿದ ಒಂದು ದಿನದ ಬಳಿಕ ಪ್ರಿಯಾಂಕ್ ಖರ್ಗೆ ಈ ಪ್ರತಿಕ್ರಿಯೆ ನೀಡಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಆರ್‌ಎಸ್‌ಎಸ್ ಮತ್ತು ಬಿಜೆಪಿ ತಮ್ಮ ಪದಪ್ರಯೋಗವನ್ನು ಬದಲಾಯಿಸಲು ಹರಸಾಹಸಪಡುತ್ತಿವೆ. ಆದರೆ, ದುರದೃಷ್ಟವಶಾತ್ ಅದರಿಂದ ಅವರ ಸಿದ್ಧಾಂತ ಬದಲಾಗುವುದಿಲ್ಲ. ಜನರನ್ನು ವಿಭಜಿಸುವುದು, ಯುವಕರನ್ನು ದಾರಿ ತಪ್ಪಿಸುವುದು ಮತ್ತು ದ್ವೇಷವನ್ನು ಹೊಸ ರೂಪದಲ್ಲಿ ಮಂಡಿಸುವುದು ಮುಂದುವರಿದಿದೆ. ಅದೇ ಸಂಘ, ಭಾಷೆ ಮಾತ್ರ ಹೊಸದು ಎಂದು ಟೀಕಿಸಿದ್ದಾರೆ. ಯುವ ಸಮಾವೇಶದಲ್ಲಿ ಮಾತನಾಡಿದ ಮೋಹನ್ ಭಾಗವತ್, ಸಮಾಜದಲ್ಲಿ ತಾರತಮ್ಯ ಸಂಪೂರ್ಣವಾಗಿ ನಿರ್ಮೂಲನೆಯಾಗುವವರೆಗೆ ಮೀಸಲಾತಿ ವ್ಯವಸ್ಥೆ ಮುಂದುವರಿಯಬೇಕು ಎಂದು ಹೇಳಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳನ್ನು ಉಲ್ಲೇಖಿಸಿದ ಅವರು, ಮೀಸಲಾತಿ ಸಾಮಾಜಿಕ ಕಾರಣಗಳಿಂದ ಜಾರಿಯಲ್ಲಿದ್ದು, ಸಮಾಜದಲ್ಲಿ ಅಸಮಾನತೆ ಇರುವವರೆಗೆ ಅದು ಮುಂದುವರಿಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.


ಉದಯವಾಹಿನಿ ಚಿತ್ರ

### ಸಮಾಜದಲ್ಲಿ ತಾರತಮ್ಯ ಮುಂದುವರಿಯಲಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮೀಸಲಾತಿಯ ಬಗ್ಗೆ ಏನು ಹೇಳಿದ್ದರು ಎಂಬುದನ್ನು ನಾವು ಪ್ರಾಮಾಣಿಕವಾಗಿ ಅನುಸರಿಸಿದರೆ ಯಾವುದೇ ಸಮಸ್ಯೆ ಇರುವುದಿಲ್ಲ. ಮೀಸಲಾತಿ ಸಾಮಾಜಿಕ ಕಾರಣಗಳಿಂದ ಬಂದಿದೆ. ಸಮಾಜದಲ್ಲಿ ತಾರತಮ್ಯ ಇರುವವರೆಗೆ ಅದು ಮುಂದುವರಿಯಲಿದೆ. ಈಗಾಗಲೇ ಅದರ ಲಾಭ ಪಡೆದವರು ಮುಂದೆ ಇತರರಿಗೂ ಅವಕಾಶ ಕಲ್ಪಿಸಬೇಕು ಎಂದು ಹೇಳಿದ್ದಾರೆ.

# ಖಾಸಗಿ ಶಾಲೆಗಳ ಡೊನೇಷನ್ ದಂಧೆಗೆ ಬ್ರೇಕ್! ನಿಯಮ ಉಲ್ಲಂಘಿಸಿದರೆ 10 ಪಟ್ಟು ದಂಡ

• ಉದಯವಾಹಿನಿ, ಬೆಂಗಳೂರು

ನಮ್ಮ ಮಕ್ಕಳು ಚೆನ್ನಾಗಿ ಓದಬೇಕು, ಪಠ್ಯದೊಂದಿಗೆ ಆಟದಲ್ಲೂ ಹಾಗೂ ತಂತ್ರಜ್ಞಾನದಲ್ಲೂ ಮುಂದಿರಬೇಕು ಅನ್ನುತ್ತಾ ಖಾಸಗಿ ಶಾಲೆಗಳಿಗೆ ಸೇರಿಸುತ್ತೇವೆ. ಈ ವೇಳೆ ಡೊನೇಷನ್ ಅನ್ನೋದು ತಪ್ಪು ಎಂದು ಗೊತ್ತಿದ್ದರು ಸಹ ಸಾವಿರಾರೂ ರೂಪಾಯಿ ಡೊನೇಷನ್ ಕೊಟ್ಟು ಖಾಸಗಿ ಶಾಲೆಗಳಿಗೆ ಸೇರಿಸುತ್ತೇವೆ. ಆದ್ರೆ, ಇದೀಗ ಖಾಸಗಿ ಶಾಲೆಗಳ ಡೊನೇಷನ್ ಹಾವಳಿಗೆ ಲಗಾಮು ಹಾಕಲು ಮುಂದಾಗಿರುವ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯು ಕಠಿಣ ನಿಯಮವನ್ನು ಜಾರಿಗೆ ತಂದಿದೆ. ಖಾಸಗಿ ಶಾಲೆಗಳಲ್ಲಿ ದಾಖಲಾತಿ ಸಮಯದಲ್ಲಿ ನಡೆಯುವ ಅಕ್ರಮಗಳನ್ನು ತಡೆಯುವುದು ಮತ್ತು ಪೋಷಕರಿಗೆ ಪಾರದರ್ಶಕತೆ ಒದಗಿಸುವ ಮುಖ್ಯ ಉದ್ದೇಶದೊಂದಿಗೆ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯು, ಖಾಸಗಿ ಶಾಲೆಗಳು 2025-26ನೇ ಸಾಲಿಗೆ ಮಕ್ಕಳ ದಾಖಲಾತಿ ಮತ್ತು ಶುಲ್ಕ ವಸೂಲಿ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಆ ಶಾಲೆಗಳು ತಾವು ನಿಗದಿಪಡಿಸಿರುವ ಶುಲ್ಕದ ವಿವರಗಳನ್ನು ಶಾಲಾ ವೆಬ್‌ಸೈಟ್ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ತಿಳಿಸಿದೆ.

ಮುಂದುವರೆದು, ದಾಖಲಾತಿ ಪ್ರಕ್ರಿಯೆಯಲ್ಲಿ ಪೋಷಕರಿಂದ ಕಾನೂನುಬಾಹಿರವಾಗಿ ಡೊನೇಷನ್ ಪಡೆದರೆ, ಪಡೆದ ಶುಲ್ಕದ 10 ಪಟ್ಟು ದಂಡವನ್ನು ಆ ಶಾಲೆಗಳಿಗೆ ವಿಧಿಸಲಾಗುವುದು ಎಂದು ತಿಳಿಸಲಾಗಿದೆ.

# ಕೃಷಿ ಅಧಿಕಾರಿ ನೇಮಕಾತಿ ಪರೀಕ್ಷೆ ತಾತ್ಕಾಲಿಕ ಮುಂದೂಡಿಕೆ: ಸಿಎಂ ಡಿ ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಆಗಸ್ಟ್ 8 ಮತ್ತು 9ರಂದು ನಡೆಯಬೇಕಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ.

ಈ ಹುದ್ದೆಗಳಿಗೆ ಬಿಇ ಹಾಗೂ ಬಿಟೆಕ್ ಪದವೀಧರರಿಗೂ ಅರ್ಜಿ ಸಲ್ಲಿಸಲು ಅವಕಾಶ ನೀಡಿರುವ ಕೆಇಎ ನಿರ್ಧಾರವನ್ನು



ವಿರೋಧಿಸಿ ಕೃಷಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಕೃಷಿ ಪದವಿ ಪಡೆದ ಅಭ್ಯರ್ಥಿಗಳಿಗೆ ಮಾತ್ರ ಈ ಹುದ್ದೆಗಳಿಗೆ ಅರ್ಹತೆ ನೀಡಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ. ಆದರೆ ಮರುನಿಗದಿಯಾಗುವ ಪರೀಕ್ಷೆಯಲ್ಲಿ ಬಿಇ ಮತ್ತು ಬಿಟೆಕ್ ಅಭ್ಯರ್ಥಿಗಳನ್ನು ಹೊರಗಿಡಲಾಗುತ್ತದೆಯೇ ಎಂಬ ಬಗ್ಗೆ ಮುಖ್ಯಮಂತ್ರಿ ಯಾವುದೇ ಸ್ಪಷ್ಟನೆ ನೀಡಿಲ್ಲ.

ಪ್ರತಿಭಟನೆ ನಡೆಸುತ್ತಿದ್ದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಆಗಸ್ಟ್ 4ರಂದು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ತಮ್ಮ ಅಹವಾಲು ಸಲ್ಲಿಸಿದ್ದರು.

ಈ ಕುರಿತು ಸಾಮಾಜಿಕ ಜಾಲತಾಣ ಪೋಸ್ಟ್ ಮಾಡಿದ


ಉದಯವಾಹಿನಿ ಚಿತ್ರ

ಮುಖ್ಯಮಂತ್ರಿಗಳು, ಆಗಸ್ಟ್ 4ರಂದು ವಿದ್ಯಾರ್ಥಿಗಳು ನನ್ನನ್ನು ಭೇಟಿ ಮಾಡಿ ತಮ್ಮ ಆತಂಕವನ್ನು ಹಂಚಿಕೊಂಡಾಗ, ಅವರ ಅನಿಶ್ಚಿತತೆ ಮತ್ತು ಕಳವಳವನ್ನು ಅರ್ಥಮಾಡಿಕೊಂಡೆ. ಅವರ ನ್ಯಾಯಸಮ್ಮತ ಬೇಡಿಕೆಗಳನ್ನು ಸೂಕ್ಷ್ಮವಾಗಿ ಮತ್ತು ನ್ಯಾಯಯುತವಾಗಿ ಪರಿಗಣಿಸುವ ಭರವಸೆ ನೀಡಿದ್ದೆ. ಕೃಷಿ ಪದವೀಧರರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಕೃಷಿ ಅಧಿಕಾರಿ ನೇಮಕಾತಿ ಪರೀಕ್ಷೆಯನ್ನು ತಾತ್ಕಾಲಿಕವಾಗಿ ಮುಂದೂಡಲು ನಿರ್ಧರಿಸಿದ್ದೇವೆ, ಎಂದು ತಿಳಿಸಿದ್ದಾರೆ.

### ಪ್ರತಿಭಟನೆ ಹಿಂಪಡೆಯುವಂತೆ ಮನವಿ

ಇದೇ ವೇಳೆ, ಐಟಿ/ಬಿಟಿ ಮತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಫ್ರೀಡಂ ಪಾರ್ಕ್‌ಗೆ ಭೇಟಿ ನೀಡಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿ, ಪ್ರತಿಭಟನೆ ಹಿಂಪಡೆಯುವಂತೆ ಮನವಿ ಮಾಡಿದರು.

# ಎಸ್ಐಆರ್ ವೇಳೆ ASDDO ಪಟ್ಟಿಯಲ್ಲಿ ಹೆಸರು ಇದೆಯೇ: ಮತದಾರರು ಏನು ಮಾಡಬೇಕು?

## ತಮ್ಮ ಹೆಸರು ತಪ್ಪಾಗಿ ಎಎಸ್‌ಡಿಡಿಒ ಪಟ್ಟಿಗೆ ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ನಡೆದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ, ಕೆಲ ಮತದಾರರು ತಮ್ಮ ಸಹಿ ಮಾಡಿದ ಎಣಿಕೆ ನಮೂನೆಯನ್ನು ಬೂತ್ ಮಟ್ಟದ ಅಧಿಕಾರಿಗೆ ಸಲ್ಲಿಸಿದ್ದರೂ, ತಮ್ಮ ಹೆಸರು ಪಟ್ಟಿಯಲ್ಲಿ ಕಾಣೆಸಿಕೊಂಡಿದೆ ಎಂದು ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಮತದಾರರು ತಮ್ಮ ಹೆಸರು ತಪ್ಪಾಗಿ ಎಎಸ್‌ಡಿಡಿಒ ಪಟ್ಟಿಗೆ ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವಂತೆ ಮತದಾರರಿಗೆ ಮನವಿ ಮಾಡಿದ್ದಾರೆ.

ನಾವು ವಿಧಾನಸಭಾ ಕ್ಷೇತ್ರವಾರು ಹಾಗೂ ಮತಗಟ್ಟೆವಾರು ಎಎಸ್‌ಡಿಡಿಒ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದೇವೆ. ಆನ್ ಲೈನ್ ಅಥವಾ ಆಫ್‌ಲೈನ್ ಮೂಲಕ ನಮೂನೆ ಸಲ್ಲಿಸಿ ಸ್ವೀಕೃತಿ ಪತ್ರ ಪಡೆದಿದ್ದರೂ, ನಿಮ್ಮ ಹೆಸರು ಎಎಸ್‌ಡಿಡಿಒ (ಹೊರಗಿಡುವ) ಪಟ್ಟಿಯಲ್ಲಿ ಇದ್ದರೆ, ತಕ್ಷಣವೇ ಬಿಎಲ್‌ಒ ಅವರನ್ನು ಸಂಪರ್ಕಿಸಿ 'ರೋಲ್‌ಬ್ಯಾಕ್' ಮಾಡಿಸಬೇಕು ಎಂದರು.

ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಿಸಿರುವ ಮಾಹಿತಿ ಪ್ರಕಾರ, ಎಎಸ್‌ಡಿಡಿಒ ಪಟ್ಟಿಯಲ್ಲಿ ಹೆಸರು ಇರುವುದು ಮಾತ್ರಕ್ಕೆ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಅಳಿಸಲಾಗಿದೆ ಎಂಬ ಅರ್ಥವಲ್ಲ. ಪರಿಶೀಲನೆಗಾಗಿ ಮಾತ್ರ ಆ ದಾಖಲೆ ಗುರುತಿಸಲಾಗಿದೆ. ಎಎಸ್‌ಡಿಡಿಒ ಪಟ್ಟಿಯಲ್ಲಿ ಹೆಸರು ಕಂಡುಬಂದರೆ ಏನು ಮಾಡಬೇಕು ಕರ್ನಾಟಕ ವೆಬ್‌ಸೈಟ್ ಅಥವಾ ನಿಮ್ಮ ಬೂತ್ ಮಟ್ಟದ ಅಧಿಕಾರಿ ಮೂಲಕ ನಿಮ್ಮ ಹೆಸರು ಎಎಸ್‌ಡಿಡಿಒ ಪಟ್ಟಿಯಲ್ಲಿದೆಯೇ ಎಂದು ಪರಿಶೀಲಿಸಿ.


ಉದಯವಾಹಿನಿ ಚಿತ್ರ

ಅಗತ್ಯ ದಾಖಲೆಗಳೊಂದಿಗೆ ಎಣಿಕೆ ನಮೂನೆಯನ್ನು ಮರುಸಲ್ಲಿಸಿ ಅಥವಾ ಸರಿಪಡಿಸಿ ದಾಖಲೆ ಸಲ್ಲಿಸಿದ ನಂತರ, ಪರಿಶೀಲನೆ ಪೂರ್ಣಗೊಂಡು ನಿಮ್ಮ ಹೆಸರು ಸರಿಯಾಗಿ ನವೀಕರಿಸುವವರೆಗೆ ಬಿಎಲ್‌ಒ ಅಥವಾ ಮತದಾರರ ನೋಂದಣಿ ಅಧಿಕಾರಿ ಅವರೊಂದಿಗೆ ನಿರಂತರ ಸಂಪರ್ಕದಲ್ಲಿರಿ. ನೀವು ಶಾಶ್ವತವಾಗಿ ಬೇರೆ ಕ್ಷೇತ್ರಕ್ಕೆ ಸ್ಥಳಾಂತರವಾಗಿದ್ದರೆ, ನಮೂನೆ-6 ಅಥವಾ ಎಸ್‌ಐಆರ್ ಅಡಿಯಲ್ಲಿ ಅನ್ವಯಿಸುವ ಪ್ರಕ್ರಿಯೆಯ ಮೂಲಕ ಹೊಸ ವಿಳಾಸದಲ್ಲಿ ಮತದಾರರಾಗಿ ನೋಂದಾಯಿಸಿಕೊಳ್ಳಿ.

'ರೋಲ್‌ಬ್ಯಾಕ್' ಸೌಲಭ್ಯ ಆಗಸ್ಟ್ 8ರವರೆಗೆ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರ ಪ್ರಕಾರ, ಬಿಎಲ್‌ಒ ನಮೂನೆಯನ್ನು ಸಂಗ್ರಹಿಸಿದ್ದರೂ ಅದನ್ನು ಡಿಜಿಟಲೀಕರಣ ಮಾಡದಿದ್ದರೆ ಅಥವಾ ತಪ್ಪಾಗಿ ಎಎಸ್‌ಡಿಡಿಒ ಪಟ್ಟಿಗೆ ಸೇರಿಸಿದ್ದರೆ, 'ರೋಲ್‌ಬ್ಯಾಕ್' ಆಯ್ಕೆ ಇದೆ.

**ನಿಮ್ಮ ಹೆಸರು ಯಾವ ಕಾರಣಕ್ಕಾಗಿ ಗುರುತಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳಿ. ಕಾರಣಗಳು**

1 : ಗೈರುಹಾಜರು
2 : ಸ್ಥಳಾಂತರ
3 : ಮೃತ
4 : ನಕಲು
5 : ಇತರೆ




### ಮರುಸಲ್ಲಿಸಿ ಅಥವಾ ಸರಿಪಡಿಸಿ

### ಡಿಜಿಟಲೀಕೃತ ನಮೂನೆಗಳ ಪಟ್ಟಿ

ಆಗಸ್ಟ್ 8ರವರೆಗೆ ಬಿಎಲ್‌ಒ ಅವರು ನಿಮ್ಮ ನಮೂನೆಯನ್ನು ಎಎಸ್‌ಡಿಡಿಒ ಪಟ್ಟಿಯಿಂದ ಡಿಜಿಟಲೀಕೃತ ನಮೂನೆಗಳ ಪಟ್ಟಿಗೆ ವರ್ಗಾಯಿಸಬಹುದು. ಬಳಿಕ ನಿಮ್ಮ ನಮೂನೆ ಡಿಜಿಟಲೀಕೃತ ಪಟ್ಟಿಗೆ ಸೇರಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ಪ್ರಕ್ರಿಯೆಗೆ ಪ್ರತ್ಯೇಕ ಸ್ವೀಕೃತಿ ಪತ್ರ ಸೃಷ್ಟಿಯಾಗುವುದಿಲ್ಲ.

ನಿಮ್ಮ ಬಳಿ ಸ್ವೀಕೃತಿ ಪತ್ರ ಇದ್ದು, ಜೊತೆಗೆ ನಿಮ್ಮ ಹೆಸರು ಎಎಸ್‌ಡಿಡಿಒ ಪಟ್ಟಿಯಲ್ಲಿ ಇಲ್ಲದಿದ್ದರೆ ಮಾತ್ರ ನಿಮ್ಮ ಎಸ್‌ಐಆರ್ ಎಣಿಕೆ ಪ್ರಕ್ರಿಯೆ ಯಶಸ್ವಿಯಾಗಿದೆ ಎಂದು ಪರಿಗಣಿಸಲಾಗುತ್ತದೆ ಎಂದು ಮುಖ್ಯ ಚುನಾವಣಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಅಂತರಾಳದಿಂದ... EDITORIAL

# ಕೃತಕ ಪನೀರ್ ದಂಧೆಗೆ ಕಡಿವಾಣ ಕಟ್ಟುನಿಟ್ಟಿನ ಮಾರ್ಗಸೂಚಿ ಅಗತ್ಯ



ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯ ಸರ್ಕಾರಗಳು ಒಂದು ವರ್ಷದ ಅವಧಿಗೆ ಕೃತಕ ಪನೀರ್ ತಯಾರಿಕೆ ಮತ್ತು ಮಾರಾಟ ನಿಷೇಧಿಸಿ ಆದೇಶ ಹೊರಡಿಸಿವೆ. ಕೃತಕ ಪನೀರ್ ತಯಾರಿ ಮತ್ತು ಮಾರಾಟ ದಂಧೆಯಾಗಿ ಮಾರ್ಪಟ್ಟಿರುವ ಹಿನ್ನೆಲೆಯಲ್ಲಿ ಆಹಾರ ಸುರಕ್ಷಾ ಪ್ರಾಧಿಕಾರದ ನಿರ್ದೇಶನದಂತೆ ಈ ಎರಡು ರಾಜ್ಯ ಸರ್ಕಾರಗಳು ಈ ನಿರ್ಧಾರ ಕೈಗೊಂಡಿವೆ. ಇದರಿಂದಾಗಿ ಈಗ ದೇಶದೆಲ್ಲೆಡೆ ಪನೀರ್‌ನ ಗುಣಮಟ್ಟ, ಅವುಗಳ ಸೇವನೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಕುರಿತಾಗಿನ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ಹಾಲಿನಿಂದ ತಯಾರಿಸಲಾಗುವ ನೈಜ ಪನೀರ್‌ನ ಬದಲಾಗಿ ಸಸ್ಯಜನ್ಯ ಎಣ್ಣೆ, ಪಿಷ್ಟ ಮತ್ತಿತರ ಕೃತಕ ಪದಾರ್ಥಗಳನ್ನು ಬಳಸಿ ತಯಾರಿಸಲಾಗುವ ಪನೀರ್ ಅನ್ನು ಅಗ್ಗದ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದ್ದು ಇದು ಮಾನವನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಜನರಿಗೂ ಈ ಕೃತಕ ಪನೀರ್‌ನ ಕುರಿತಂತೆ ಅರಿವಿನ ಕೊರತೆ ಇದೆ. ಇದನ್ನೇ ಬಂಡವಾಳವನ್ನಾಗಿಸಿಕೊಂಡಿರುವ ತಯಾರಕರು ಮತ್ತು ವ್ಯಾಪಾರಿಗಳು ಹಾಲಿನಿಂದ ತಯಾರಿಸಲಾಗಿದೆ ಎಂದು ಸುಳ್ಳು ಹೇಳಿ ಅಗ್ಗದ ಬೆಲೆಯಲ್ಲಿ ಈ ಕೃತಕ ಪನೀರ್ ಅನ್ನು ಮಾರಾಟ ಮಾಡುತ್ತಿದ್ದಾರೆ.

> **ಸದ್ಯ ದೇಶಾದ್ಯಂತ ಪನೀರ್‌ಗೆ ವ್ಯಾಪಕ ಬೇಡಿಕೆ ಇದೆ. ಇದನ್ನೇ ಬಂಡವಾಳವನ್ನಾಗಿಸಿಕೊಂಡಿರುವ ಈ ಕೃತಕ ಪನೀರ್‌ಗಳ ತಯಾರಕರು, ಸುಳ್ಳನ್ನು ಮರೆಮಾಚಿ ನೈಜ ಪನೀರ್ ಎಂದೇ ಬಿಂಬಿಸಿ ಕೃತಕ ಪನೀರ್‌ಗಳನ್ನು ಎಗ್ಗಿಲ್ಲದೆ ಮಾರಾಟ ಮಾಡುತ್ತಿದ್ದಾರೆ.**
> **ಕೃತಕ ಪನೀರ್ ಸೇವನೆಯ ದುಷ್ಪರಿಣಾಮಗಳ ಬಗೆಗೆ ಎಚ್ಚರಿಕೆ ನೀಡುತ್ತಲೇ ಬರಲಾಗಿದ್ದರೂ ಇದರ ತಯಾರಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಆಹಾರ ಸುರಕ್ಷಾ ಪ್ರಾಧಿಕಾರವಾಗಲಿ ಆರೋಗ್ಯ ಇಲಾಖೆಯಾಗಲಿ ಕಟ್ಟುನಿಟ್ಟಿನ ಮಾರ್ಗಸೂಚಿ ರೂಪಿಸಿಲ್ಲ.**

ದಂಧೆಕೋರರ ಈ ಮೋಸದ ಜಾಲಕ್ಕೆ ಗ್ರಾಹಕರು ಬಲಿಪಶುಗಳಾಗುವಂತಾಗಿದೆ. ಹಾಲಿನಿಂದ ತಯಾರಿಸಲಾಗುವ ನೈಜ ಪನೀರ್‌ಗೂ ಈ ಕೃತಕ ಪನೀರ್ ತಯಾರಿಗೂ ತಗಲುವ ವೆಚ್ಚದಲ್ಲಿ ಅಜಗಜಾಂತರವಿದ್ದು, ಈ ಕಾರಣದಿಂದಾಗಿಯೇ ಕೃತಕ ಪನೀರ್ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಲಭಿಸುತ್ತಿದೆ. ಆದರೆ ಬಹುತೇಕ ಕೃತಕ ಪನೀರ್ ತಯಾರಕರು ಈ ಪನೀರ್‌ಪ್ಯಾಕೆಟ್‌ಗಳಲ್ಲಿ ಇದನ್ನು ಹಾಲಿನಿಂದ ತಯಾರಿಸಿದ ಪನೀರ್ ಎಂದೇ ನಮೂದಿಸುತ್ತಿರುವುದು ಕೂಡ ಆಹಾರ ಸುರಕ್ಷಾ ಪ್ರಾಧಿಕಾರದ ಕೆಂಗಣ್ಣಿಗೆ ಗುರಿಯಾಗಿದೆ.

ಮಹಾರಾಷ್ಟ್ರ ಮತ್ತು ಗುಜರಾತ್‌ನ ವಿವಿಧೆಡೆ ನಿರಂತರವಾಗಿ ಪರಿಶೀಲನೆ ನಡೆಸಿದ ವೇಳೆ ಲೋಪದೋಷಗಳು, ಮೋಸಗಳು ಬಯಲಾದ ಹಿನ್ನೆಲೆಯಲ್ಲಿ ಅಲ್ಲಿನ ರಾಜ್ಯ ಸರ್ಕಾರಗಳು ವರ್ಷದ ಅವಧಿಗೆ ಇವುಗಳ ತಯಾರಿ ಮತ್ತು ಮಾರಾಟವನ್ನು ಕಡ್ಡಾಯವಾಗಿ ನಿಷೇಧಿಸಿ ಆದೇಶ ಹೊರಡಿಸಿವೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಪನೀರ್‌ನ ಗುಣಮಟ್ಟದ ಕುರಿತಂತೆ ಈಗ ಜನರಲ್ಲಿ ಒಂದಿಷ್ಟು ಸಂಶಯಗಳು ಮೂಡತೊಡಗಿವೆ. ಹಾಲು ಉತ್ಪಾದನೆ ಸಹಿತ ಕ್ಷೀರೋದ್ಯಮದಲ್ಲಿ ವಿಶ್ವದಲ್ಲಿಯೇ ಮುಂಚೂಣಿಯಲ್ಲಿರುವ ಭಾರತದಲ್ಲಿ ಹಾಲಿನ ಉತ್ಪನ್ನಗಳ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಕೃತಕ ಪನೀರ್‌ನ ತಯಾರಿ ಮತ್ತು ಮಾರಾಟದ ಕುರಿತಂತೆ ಸರಕಾರಗಳು ಕಟ್ಟುನಿಟ್ಟಿನ ಮಾರ್ಗಸೂಚಿ ರೂಪಿಸಿ ಜಾರಿಗೆ ತರುವ ಅಗತ್ಯವಿದೆ. ಆಹಾರ ಸುರಕ್ಷಾ ಪ್ರಾಧಿಕಾರ ದೇಶದಲ್ಲಿ ತಯಾರಾಗಿ ಮಾರುಕಟ್ಟೆಗೆ ಪೂರೈಕೆಯಾಗುತ್ತಿರುವ ಪನೀರ್‌ನ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಬೇಕು.

ಇನ್ನು ಗ್ರಾಹಕರು ಕೂಡ ಕಡಿಮೆ ವೆಚ್ಚದ ಪನೀರ್‌ಗೆ ಮಾರುಹೋಗದೆ ಹಾಲಿನಿಂದಲೇ ತಯಾರಿಸಲಾದ ನೈಜ ಪನೀರ್‌ನ ಖರೀದಿಗೆ ಮುಂದಾಗಬೇಕು.

# ರಾಮಾಯಣ



**ತತ್ವಸ್ವರೂಪವನ್ನು ಉಪದೇಶಿಸಿ ಮರುತಾತ್ಮಜನನ್ನು ಶ್ರೀರಾಮನು ಬ್ರಹ್ಮಪದವಿಯಲ್ಲಿ ಕುಳ್ಳಿರಿಸಿದ್ದನು**

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಲೋಕದ ನಡೆಯನ್ನು ತೋರಿಸುವವನ ಹಾಗೆ ಕೆಂದಾವರೆಗಣ್ಣಳ ಸೀತೆಯನ್ನು ನೆನೆಸಿಕೊಂಡು ಅಳಲುತ್ತ ಅವಳ ಶ್ರೀಕರ ಗುಣಗಳನ್ನು ಹೊಗಳುತ್ತ ಇದ್ದ ರಘುನಾಥನನ್ನು ಸುಗ್ರೀವನು ನಾನಾ ಬಗೆಯಲ್ಲಿ ಸಮಾಧಾನಪಡಿಸಿದ, ಲಕ್ಷ್ಮಣನೂ ಸಾಂತ್ವನದ ನುಡಿಗಳನ್ನಾಡಿದ. ಅಷ್ಟು ಹೊತ್ತಿಗೆ ಸೂರ್ಯಾಸ್ತ ಸಮಯವು ಸನ್ನಿಹಿತವಾಯಿತು; ಆಗ ಕಪಿಸೈನ್ಯದ ಕಲರವವನ್ನು ಕೇಳಿ ರಘುಜನು ಸ್ವಲ್ಪ ಮಟ್ಟಿಗಿನ ಸಮಾಧಾನವನ್ನು ತಾಳಿದ ರಾತ್ರಿಯಲ್ಲಿ ಸೇನಾಪತಿಯು ಅಡಿಗಡಿಗೆ ಸೈನ್ಯದ ವಿಷಯವನ್ನು ರಾಜನಿಗೆ ವರದಿ ಮಾಡುತ್ತ ಎಚ್ಚರದಿಂದಿದ್ದ. ಇತ್ತ ದಾನವೇಶ್ವರನು ರಕ್ಕಸಮುಖ್ಯರನ್ನು ಹೆಸರು ಹಿಡಿದು ಕರೆದು ಕುಳ್ಳಿರಿಸಿ ಘೋರವೃತ್ತಾಂತವನ್ನು ವಿವರಿಸಲು ಅನುವಾದ 'ಹುಲುಕಪಿಯೊಂದು ಬಂದು ನಮ್ಮ ನಾಡನ್ನು ಹೊಕ್ಕು ನೆಲದಣುಗಿಯನ್ನು ಕಂಡು, ದೈತೇಯ ಜನರನ್ನು ತರಿದು, ಮನೆಮಠಗಳನ್ನು ಮುರಿದು, ವನಗಳನ್ನು ನಾಶಮಾಡಿದುದನ್ನು ನೀವೆಲ್ಲರೂ ಕಂಡಿರುಎರಷ್ಟೇ. ಈಗ ತಮ್ಮ ಕಡೆಯವರ ಜೊತೆಯಲ್ಲಿ ಬಂದು ಸಮುದ್ರದ ತಡಿಯಲ್ಲಿರುವ ವಿಷಯವನ್ನೆಲ್ಲ ಗೂಢಚಾರರ ಮುಖೇನ ತಿಳಿಯುತ್ತಿರುವಿರಲ್ಲ. ಈಗ ಎದುರಾಗಿರುವ ವಿಷಮ ಪರಿಸ್ಥಿತಿಯನ್ನು ಎದುರಿಸಲು ನಾವೇನು ಪ್ರತಿಯತ್ನ ಮಾಡಬೇಕೆಂಬ ಬಗ್ಗೆ ತಿಳಿಸಬೇಕು ಎಂದು ಕೇಳಿ ಆಮೇಲೆ, ''ಜನರಲ್ಲಿ ಉತ್ತಮರು ಅಧಮರು ಮಧ್ಯಮರು ಎಂದು ಮೂರು ಬಗೆ ಅವರ ಗುಣದೋಷಗಳನ್ನು ಮುಂಚಿತವಾಗಿಯೇ ತಿಳಿದ ಮುಚ್ಚುಮರೆ ಮಾಡದೆ ಮುಂದೆ ಏನು ಮಾಡಬೇಕೆಂಬುದನ್ನು ತಿಳಿಸಿರಿ'' ಎಂದು ಆಪ್ತಜನರನ್ನು ಕೇಳಿದ. ''ಅಖಿಲಾಗಮಜ್ಞರು ಮಂತ್ರಿಗಳು ಮುಂತಾದವರ ಸಭೆ ಸೇರಿಸಿ ಸಮಾಲೋಚನೆ ಮಾಡಿ, ನಾನಾ ನಿಟ್ಟಿನಲ್ಲಿ ನೋಡಿ, ಒಮ್ಮತವನ್ನು ಪಡೆದು ಮಿತ್ರ ರಾಜರ ಸಲಹೆ ಪಡೆದು ನಡೆಯುವವನು ಉತ್ತಮ ಪುರುಷನೆನಿಸುತ್ತಾನೆ; ಅಂತಹವನಿಗೆ ಊಣಯವು ಸಂಭವಿಸುವುದೇ? ಬಂಧುಜನರು ಮತ್ತು ಮಂತ್ರಕೋವಿದರು ಹೇಳುವ ಮಾತುಗಳನ್ನು ಒತ್ತಟ್ಟಿಗಿರಿಸಿ, ಹಿತವಾವುದು ಅಹಿತವಾವುದು ಎಂದು ತಿಳಿಯದೆ ಆತ್ಮಹಿತವನ್ನು ಮರೆತು, ಕಾಲೋಚಿತವಾದುದನ್ನು ಕಡೆಗಣಿಸಿ ದಂದುಗಕ್ಕೆ ಸಿಲುಕಿದಾಗ ದಂಡನೆಯಿಂದ ಜನರಿಗೆ ಅಪ್ಪಣೆ ಮಾಡುವವನನ್ನು ಮಧ್ಯಮ ಎನ್ನುತ್ತಾರೆ; ಧೀಯುತರು ಮಂತ್ರಿಗಳು ಮುಂತಾದವರಿಗೆ ಹೇಳದೆ ತನ್ನ ಮನಸಿಗೆ ಬಂದಂತೆ ಆಲೋಚನೆಯನ್ನು ಮಾಡಿ ಔದ್ಧತ್ಯದಿ0ದ ತನಗೆ ತಾನೇ ತೀರ್ಮಾನವನ್ನು ಕೈಗೊಂಡರೆ ಕಾರ್ಯವು ಕೆಡುತ್ತದೆಂಬುದನ್ನು ಅರಿತುಕೊಳ್ಳದೆ ಕೆಲಸ ಮಾಡುವವನು ಅಧಮನೆನಿಸಿಕೊಳ್ಳುತ್ತಾನೆ. ಅಂತಹವನ ಬಳಿ ಆಳುತನ ಮಾಡುವವನಿಗೆ ಕ್ಷೇಮವಿಲ್ಲ. ಇದನ್ನಾಲೋಚಿಸಿ ಸಾಧುವಾದುದನ್ನು ನನಗೆ ಬೇಗ ತಿಳಿಸಿರಿ. ಮಂತ್ರಾಲೋಚನೆಯ ಅರತಿಯಿಂದ ತನಗೆ ಇಷ್ಟವಾದ ರೀತಿಯಲ್ಲಿ ಮಾಡುವ ಕಾರ್ಯಗಳು ಅನಿಷ್ಟಕರವಾದುವು; ಯಾರಿಗೂ ತಿಳಿಯದಂತೆ ಕಾರ್ಯವೆಸಗುವುದು ನೀಚ ನೃಪಶಾಸ್ತವಲ್ಲವೇ? ಆದ್ದರಿಂದ ತನ್ನ ಮಕ್ಕಳು ಬಾಂಧವರು ಅಮಾತ್ಕರು ಮಿತ್ರರು ಸಚಿವರು ಮುಂತಾದವರನ್ನು ಸೇರಿಸಿ ಸಮಾಲೋಚನೆ ಮಾಡುತ್ತಿದ್ದೇನೆ. ನಾನು ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಉಪಾಯಗಳನ್ನು ಸೂಚಿಸಿರಿ. ಮನುಷ್ಯರೊಡನೆ ಸೇರಿ ಶಾಖಾಮೃಗಗಳು ಸಮುದದ ತಟಕ್ಕೆ ಬಂದಿದ್ದಾರೆ, ಅದನ್ನು ದಾಟುವ ಯತ್ನ ಮಾಡದೇ ಬಿಡುವುದಿಲ್ಲ.

ಅವರು ಮುಂಬರಿದ ಮೇಲೆ ಕಾರ್ಯಾವಾವುದೆಂದು ಆಲೋಚಿಸುವುದು ಸಮಂಜಸವಲ್ಲ. ಅವರು ಮುಂದೆ ಮಾಡುವುದನ್ನು ಅರಿತು ಅದನ್ನು ನಿಗ್ರಹಿಸುವ ಸನ್ನಾಹಗಳನ್ನು ಭರದಿಂದ ಮಾಡಬೇಕಾಗಿದೆ'' ಎಂದು ಮಹಾಪ್ರತಾಪಿಯಾದ ದಶಶಿರನು ಹೇಳಲು ಕುಂಭಕರ್ಣನೇ ಮುಂತಾದ ಆಪ್ತರೆಲ್ಲರೂ ರಾಜನ ಮುಂದೆ ಪರಾಕ್ರಮದ ಮಾತುಗಳನ್ನಾಡಿದರು: ''ದೇವೇಂದ್ರನೇ ಮೊದಲಾದ ದಿಕ್ಪಾಲಕರೂ ದೇವತೆಗಳ ಸಮೂಹವೂ ನಿನ್ನ ಹೆಸರು ಕೇಳಿದರೇ ಓಡಿಹೋಗುತ್ತಾರೆ, ಯಕ್ಷರೇ ಮೊದಲಾದವರು ಅಳುಕುತ್ತಾರೆ ಎಂದ ಮೇಲೆ ಉಳಿದ ಕಪಿಕೋಡಗಗಳೂ ನರರೂ ಏನು ತಾನೆ ಮಾಡಬಲ್ಲರು? ಇದನ್ನರಿಯದೆ ಅವರು ಸಮುದ್ರ ತೀರಕ್ಕೆ ಬಂದಿದ್ದಾರೆ. ನಮಗೆ ಅಪ್ಪಣೆಯನ್ನು ಕರುಣಿಸಿದರೆ ಒಂದು ಇರುಳಿನಲ್ಲಿಯೇ ಅವರನ್ನೆಲ್ಲ ಗೆಲ್ಲುವುದು ಖಂಡಿತ. ದೇವನಾಗ ಮಹಾದೇವನಾಗಲೀ ಮಾದೇವಿಯರಸನಾದ ರಾಮಪುರದರಸನಾಗಲೀ ತಮ್ಮ ಪಾವನಾಂಪ್ರಿಯ ನೇಮವನ್ನು ಹಿಡಿದು ನಿಮಿಷಾಂತರದಲ್ಲಿ ತರಿದಿಟ್ಟು ನಿರ್ವೈರವನ್ನು ಮಾಡುವುದು ನಿಶ್ಚಿತ. ರಾಜನೇ, ಈ ವಿಷಯವು ಗಂಭಿರವಾಗಿ ಯೋಚಿತಕ್ಕದ್ದೇ ಅಲ್ಲ'' ಎಂದು ರಕ್ಕಸಕುಲವೆಲ್ಲ ದಶಶಿರನಿಗೆ ಬೋಧಿಸಿದರು.

**ಮುಂದುವರೆಯುವುದು**



**ವಿದ್ಯಾರ್ಥಿ ವಿಜಯ**
ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
46

# ಡಿಜಿಟಲ್ ಶಿಸ್ತು

**ಪ್ರತಿ ವಿದ್ಯಾರ್ಥಿಯೂ ಬಲವಾದ ಪಾಸ್‌ವರ್ಡ್ ರೂಪಿಸಬೇಕು, ಅಪರಿಚಿತ ಲಿಂಕ್‌ಗಳನ್ನು ತೆರೆಯಬಾರದು ಮತ್ತು ವೈಯಕ್ತಿಕ ವಿವರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು. ನಂಬಲರ್ಹ ಶೈಕ್ಷಣಿಕ ವೆಬ್‌ಸೈಟ್‌ಗಳನ್ನು ಮಾತ್ರ ಆಯ್ಕೆ ಮಾಡುವುದು ಮತ್ತು ಸಂಶಯಾಸ್ಪದ ಸಂದೇಶಗಳನ್ನು ನಿರ್ಲಕ್ಷಿಸುವುದು ಸುರಕ್ಷಿತ ಅಭ್ಯಾಸದ ಭಾಗವಾಗಿದೆ.**



ಇಂದಿನ ಯುಗದಲ್ಲಿ ಇಂಟರ್‌ನೆಟ್ ವಿದ್ಯಾರ್ಥಿಯ ಪಠ್ಯಪುಸ್ತಕವೂ ಹೌದು, ಪರೀಕ್ಷೆಯೂ ಹೌದು. ಜ್ಞಾನದ ಬಾಗಿಲು ತೆರೆಯುವ ಈ ತಂತ್ರಜ್ಞಾನವನ್ನು ಜಾಣ್ಮೆಯಿಂದ ಬಳಸದಿದ್ದರೆ,ವೈಯಕ್ತಿಕ ಮಾಹಿತಿಯ ಸೋರಿಕೆ ಮತ್ತು ತಪ್ಪು ಮಾಹಿತಿಯ ಜಾಲಕ್ಕೆ ಸಿಲುಕುವ ಅಪಾಯವಿದೆ. ಆದ್ದರಿಂದ ಆನ್ಲೈನ್ ಸುರಕ್ಷತೆ ಕೇವಲ ತಂತ್ರವಲ್ಲ, ಅದು ಜಾಗೃತ ಡಿಜಿಟಲ್ ಜೀವನದ ಮೊದಲ ಮೆಟ್ಟಿಲು.

ಈ ಸಣ್ಣ ಎಚ್ಚರಿಕೆಗಳು ದೊಡ್ಡ ಸೈಬರ್ ಅಪಾಯದಿಂದ ರಕ್ಷಿಸುತ್ತವೆ.

ಮನೋವಿಜ್ಞಾನದ ದೃಷ್ಟಿಯಿಂದ ನೋಡಿದರೆ,ಡಿಜಿಟಲ್ ಜಾಗೃತಿ ಮಾನಸಿಕ ಶಾಂತಿಯನ್ನು ನೀಡುತ್ತದೆ. ನನ್ನ ಮಾಹಿತಿ ಸುರಕ್ಷಿತವಾಗಿದೆ ಎಂಬ ಭರವಸೆಯೇ ಗಮನ ಕೇಂದ್ರೀಕರಿಸಲು ನೆರವಾಗುತ್ತದೆ. ಸುರಕ್ಷಿತ ಡಿಜಿಟಲ್ ಪರಿಸರದಲ್ಲಿ ವಿದ್ಯಾರ್ಥಿಯ ಆತಂಕ ಕಡಿಮೆಯಾಗಿ, ಆತ್ಮವಿಶ್ವಾಸ ಮತ್ತು ಕಲಿಕೆಯ ಗುಣಮಟ್ಟ ಹೆಚ್ಚುತ್ತದೆ.

ಆದ್ದರಿಂದ ಆನ್ಲೈನ್ ಸುರಕ್ಷತೆಯು ಜವಾಬ್ದಾರಿ ಮತ್ತು ಆತ್ಮನಿಯಂತ್ರಣದ ಪಾಠವಾಗಿದೆ. ತಂತ್ರಜ್ಞಾನವನ್ನು ಭಯವಿಲ್ಲದೆ, ವಿವೇಚನೆಯಿಂದ ಬಳಸುವ ಕೌಶಲವೇ ಯಶಸ್ಸಿನ ಕೀಲಿ.

ಆನ್ಲೈನ್ ಸುರಕ್ಷತೆಯನ್ನು ಅಳವಡಿಸಿಕೊಂಡ ವಿದ್ಯಾರ್ಥಿಯೇ ನಿಜವಾದ ಜಾಗೃತ ಡಿಜಿಟಲ್ ನಾಗರಿಕನಾಗಿ ಬೆಳೆಯುತ್ತಾನೆ.

# ಆತ್ಮವಿಶ್ವಾಸಿ, ಯಶಸ್ವಿ ಮಕ್ಕಳನ್ನು ಬೆಳೆಸಬೇಕೇ? ಚಾಣಕ್ಯರ ಅಮೂಲ್ಯ ಪಾಠಗಳು ಪ್ರತಿಯೊಬ್ಬ ಪೋಷಕರಿಗೂ ದಾರಿದೀಪ



**ಲೇಖಕರು**
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು





ಮಕ್ಕಳ ಭವಿಷ್ಯವು ಕೇವಲ ಉತ್ತಮ ಶಿಕ್ಷಣದಿಂದ ಮಾತ್ರ ರೂಪುಗೊಳ್ಳುವುದಿಲ್ಲ. ಉತ್ತಮ ಸಂಸ್ಕಾರ, ಆತ್ಮವಿಶ್ವಾಸ, ಶಿಸ್ತು, ಜವಾಬ್ದಾರಿ ಮತ್ತು ಜೀವನ ಮೌಲ್ಯಗಳನ್ನು ಬಾಲ್ಯದಲ್ಲಿಯೇ ಕಲಿಸುವುದರಿಂದ ಅವರು ಯಶಸ್ವಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ. ಈ ವಿಚಾರದಲ್ಲಿ ಮಹಾನ್ ತತ್ವಜ್ಞಾನಿ ಹಾಗೂ ರಾಜನೀತಿಜ್ಞ ಚಾಣಕ್ಯರು ನೀಡಿರುವ ಜೀವನ ಪಾಠಗಳು ಇಂದಿಗೂ ಪ್ರಸ್ತುತವಾಗಿವೆ.ಚಾಣಕ್ಯರ ಪ್ರಕಾರ, ಮಗುವಿನ ಬೆಳವಣಿಗೆಯ ಪ್ರತಿಯೊಂದು ಹಂತಕ್ಕೂ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು. ಅವರು ಹೇಳುವಂತೆ, ಮೊದಲ ಐದು ವರ್ಷಗಳ ಕಾಲ ಮಕ್ಕಳನ್ನು ಅಪಾರ ಪ್ರೀತಿ, ಮಮತೆ ಮತ್ತು ಕಾಳಜಿಯಿಂದ ಬೆಳೆಸಬೇಕು. ಇದರಿಂದ ಮಗುವಿನಲ್ಲಿ ಭದ್ರತೆಯ ಭಾವನೆ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ. ಆದರೆ ಪ್ರೀತಿ ಎಂದರೆ ಅತಿಯಾದ ಮುದ್ದಲ್ಲ. ತಪ್ಪು ಮಾಡಿದಾಗ ಅದನ್ನು ಸೌಮ್ಯವಾಗಿ ತಿದ್ದುವ ಜವಾಬ್ದಾರಿಯೂ ಪೋಷಕರದ್ದೇ ಆಗಿದೆ. ಆರು ವರ್ಷದಿಂದ ಹದಿನೈದು ವರ್ಷದವರೆಗೆ ಮಕ್ಕಳಿಗೆ ಶಿಸ್ತು, ಸಮಯದ ಮಹತ್ವ, ಜವಾಬ್ದಾರಿ ಮತ್ತು ಉತ್ತಮ ನಡವಳಿಕೆಯನ್ನು ಕಲಿಸಬೇಕು. ಜೀವನದಲ್ಲಿ ಯಶಸ್ಸು ಸಾಧಿಸಲು ಕೇವಲ ಪ್ರತಿಭೆ ಸಾಕಾಗುವುದಿಲ್ಲ. ಶಿಸ್ತು ಮತ್ತು ಪರಿಶ್ರಮವೂ ಅಗತ್ಯ ಎಂಬುದನ್ನು ಈ ವಯಸ್ಸಿನಲ್ಲಿಯೇ ಅರ್ಥಮಾಡಿಸಬೇಕು. ಮಕ್ಕಳ ಪ್ರತಿಯೊಂದು ಆಸೆಯನ್ನು ಈಡೇರಿಸುವ ಬದಲು, ಪರಿಶ್ರಮದ ಮೌಲ್ಯವನ್ನು ತಿಳಿಸುವುದು ಉತ್ತಮ. ಹದಿನಾರು ವರ್ಷಗಳ ನಂತರ ಮಕ್ಕಳನ್ನು ಸ್ನೇಹಿತರಂತೆ ಕಾಣಬೇಕೆಂದು ಚಾಣಕ್ಯರು ಸಲಹೆ ನೀಡುತ್ತಾರೆ. ಅವರ ಅಭಿಪ್ರಾಯಗಳನ್ನು ಆಲಿಸುವುದು, ನಿರ್ಧಾರಗಳನ್ನು ಗೌರವಿಸುವುದು ಹಾಗೂ ಮಾರ್ಗದರ್ಶನ ನೀಡುವುದು ಮುಖ್ಯ. ಈ ಹಂತದಲ್ಲಿ ಅತಿಯಾದ ನಿಯಂತ್ರಣಕ್ಕಿಂತ ಪರಸ್ಪರ ನಂಬಿಕೆ ಮತ್ತು ಮುಕ್ತ ಸಂವಾದವೇ ಉತ್ತಮ ಸಂಬಂಧವನ್ನು ಬೆಳೆಸುತ್ತದೆ. ಚಾಣಕ್ಯರು ಮತ್ತೊಂದು ಮಹತ್ವದ ವಿಷಯವನ್ನು ಒತ್ತಿ ಹೇಳುತ್ತಾರೆ. ಮಕ್ಕಳು ಪೋಷಕರ ಮಾತಿಗಿಂತ ಅವರ ನಡೆ-ನುಡಿಗಳನ್ನು ಹೆಚ್ಚು ಅನುಕರಿಸುತ್ತಾರೆ. ಆದ್ದರಿಂದ ಪೋಷಕರು ಪ್ರಾಮಾಣಿಕತೆ, ವಿನಯ, ಸಮಯಪಾಲನೆ, ಶ್ರಮ ಮತ್ತು ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿಯೇ ಪಾಲಿಸಬೇಕು. ಉತ್ತಮ ಮಾದರಿಯಾದ ಪೋಷಕರೇ ಉತ್ತಮ ಮಕ್ಕಳನ್ನು ರೂಪಿಸುತ್ತಾರೆ. ಇಂದಿನ ತಾಂತ್ರಿಕ ಯುಗದಲ್ಲಿ ಮಕ್ಕಳಿಗೆ ಮೊಬೈಲ್, ಸಾಮಾಜಿಕ ಜಾಲತಾಣ ಮತ್ತು ಡಿಜಿಟಲ್ ಪ್ರಪಂಚದ ಪ್ರಭಾವ ಹೆಚ್ಚಾಗಿದೆ. ಆದ್ದರಿಂದ ಪುಸ್ತಕ ಓದುವ ಅಭ್ಯಾಸ, ಕ್ರೀಡೆ, ಪ್ರಕೃತಿಯೊಂದಿಗೆ ಸಮಯ ಕಳೆಯುವುದು, ಹಿರಿಯರಿಗೆ ಗೌರವ ನೀಡುವುದು ಹಾಗೂ ಕುಟುಂಬದೊಂದಿಗೆ ಗುಣಮಟ್ಟದ ಸಮಯ ಕಳೆಯುವುದನ್ನು ಉತ್ತೇಜಿಸಬೇಕು. ಇದರಿಂದ ಅವರ ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆ ಉತ್ತಮವಾಗುತ್ತದೆ. ಪ್ರತಿಯೊಬ್ಬ ಮಗುವಿನಲ್ಲೂ ವಿಭಿನ್ನ ಪ್ರತಿಭೆ ಇರುತ್ತದೆ. ಹೋಲಿಕೆ ಮಾಡುವ ಬದಲು ಅವರ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸುವುದು ಅತ್ಯಂತ ಮುಖ್ಯ. ಸೋಲನ್ನು ಎದುರಿಸುವ ಧೈರ್ಯ, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಮತ್ತು ಸ್ವತಂತ್ರವಾಗಿ ಯೋಚಿಸುವ ಮನೋಭಾವವನ್ನು ಬೆಳೆಸಿದಾಗ ಮಕ್ಕಳು ನಿಜವಾದ ಅರ್ಥದಲ್ಲಿ ಆತ್ಮವಿಶ್ವಾಸಿಗಳಾಗುತ್ತಾರೆ. ಒಟ್ಟಾರೆ, ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಮೌಲ್ಯಗಳನ್ನು ನೀಡುವುದು ಪೋಷಕರ ಪ್ರಮುಖ ಕರ್ತವ್ಯವಾಗಿದೆ. ಚಾಣಕ್ಯರ ಈ ಸರಳ ಆದರೆ ಆಳವಾದ ಜೀವನ ತತ್ವಗಳನ್ನು ಅನುಸರಿಸಿದರೆ, ಮಕ್ಕಳನ್ನು ಕೇವಲ ಯಶಸ್ವಿಗಳಾಗಿ ಮಾತ್ರವಲ್ಲ, ಉತ್ತಮ ವ್ಯಕ್ತಿತ್ವ ಹೊಂದಿದ ಜವಾಬ್ದಾರಿಯುತ ನಾಗರಿಕರನ್ನಾಗಿಯೂ ಬೆಳೆಸಬಹುದು. ಪೋಷಕರ ಪ್ರೀತಿ, ಶಿಸ್ತು, ಮಾರ್ಗದರ್ಶನ ಮತ್ತು ಆದರ್ಶ ಜೀವನವೇ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ಅತ್ಯಂತ ದೊಡ್ಡ ಸಂಪತ್ತು.



**ಕಲಾ ಸಾಹಿತ್ಯ**
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಹೆಸರಾಂತ ಹಾಸ್ಯ ಚಕ್ರವರ್ತಿ ಹಾಗೂ ಸಾಹಿತಿ ಶ್ರೀ ಬೀ.ಚಿ.ರವರ ಮನಮುಟ್ಟುವಂತಹ ಹಿತನುಡಿಗಳು

## ಬಾಳೊಂದು ನಿಗೂಢ ಪಯಣ

1. ದುಡಿಯದೇ ಇರುವ ಪ್ರತಿಯೊಬ್ಬ ಶ್ರೀಮಂತನೂ ಕೂಡ ಬಿಕ್ಷುಕನೆ. ಅದೇ ರೀತಿ ದುಡಿಯದೇ ಇರುವ ಸೋಮಾರಿ ಈ ದೇಶಕ್ಕೆ ಮಾರಕ. 2. ಗೆಳೆಯನನ್ನ ಉಪ್ಪಿನಂತೆ ಬಳಸಬೇಕೇ ವಿನಹಃ ಸಕ್ಕರೆಯಂತೆ ಸುರಿದುಕೊಳ್ಳಬಾರದು. 3. ಶ್ರೀಮಂತನ ಕ್ಷಯವೇ ಡಾಕ್ಟರನ ಅಕ್ಷಯಪಾತ್ರೆ. ನಮ್ಮ ದೇಹಕ್ಕೆ ನಾವೇ ಪ್ರಥಮ ವೈದ್ಯರು. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ.4. ವರ್ಷಕ್ಕೊಮ್ಮೆ ಸಾವಿನ ಬಗ್ಗೆ ಎಚ್ಚರಿಸಲು ಕಾಲರಾಯನು ಗಂಟೆ ಬಾರಿಸುವ ದಿನವೇ ಜನ್ಮ ದಿನ. 5. ಬಾಳಿನ ವ್ಯಾಕರಣ. ಹೆಣ್ಣು-ಪದ್ಯ ಗಂಡು-ಗದ್ಯ. ಮಕ್ಕಳು-ವ್ಯಾಕರಣ. 6. ತಾಳಿ ಕದ್ದವನಿಗೆ ಕಠಿಣಶಿಕ್ಷೆ, ಅದೇ ತಾಳಿ ಕಟ್ಟಿದವನಿಗೆ ಜೀವಾವಧಿ ಶಿಕ್ಷೆ. 7. ಮನೆ ನಿಂತಿರುವುದು ಮಡದಿಯಿಂದ ಅದು ಬಿದ್ದರೆ ಗಂಡನ ತಲೆಯ ಮೇಲೆ. 8. ವಾರದಲ್ಲಿ ಕನಿಷ್ಠಪಕ್ಷ ಮೂರು ದಿನವಾದರೂ ನಗುತ್ತಿರಬೇಕು, ಅಂದರೆ ನಿನ್ನೆ ,ಇಂದು, ನಾಳೆ.

9. ಗಂಡ ಹೆಂಡತಿಯರ ನಡುವೆ ಇರುವ ಮನ: ಸ್ತಾಪ ಹಾಗೂ ಗೊಂದಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಈ ಹಾಸ್ಯಕ್ಕಿದೆ.

10. ಗಂಡ ಹೆಂಡತಿ ಮತ್ತು ಮಕ್ಕಳು ಪ್ರೀತಿ ,ವಾತ್ಸಲ್ಯ, ಅನ್ಯೋನ್ಯದಿಂದ ಇರುವುದರಲ್ಲಿಯೇ ತೃಪ್ತಿ- ಸಂತೃಪ್ತಿಯನ್ನ ಅನುಭವಿಸುವ ಕುಟುಂಬಕ್ಕೆ ಹೊರಗಡೆ ಇರುವ ಸ್ನೇಹಿತರ ಅಗತ್ಯ ಇಲ್ಲ. 11. ಯಾವ ಕುಟುಂಬ ಆ ಮನೆಯಲ್ಲಿ ಆನಂದವಾಗಿರುತ್ತಾರೋ ಆ ಮನೆಯೇ ಸ್ವರ್ಗ.12. ದೇಶ ಸುತ್ತ ಬೇಕಾಗಿಲ್ಲ, ಕೋಶ ಓದಬೇಕಾಗಿಲ್ಲ ಇರುವ ಸಾಮಾನ್ಯ ಜ್ಞಾನವನ್ನು ಜೀವನದ ಬದುಕಿನಲ್ಲಿ ಪ್ರಾಮಾಣಿಕವಾಗಿ ಅಳವಡಿಸಿಕೊಂಡರೆ ಬದುಕು ಸಾರ್ಥಕ. 13. ಮಕ್ಕಳನ್ನ ಹೊಡೆಯಬೇಕಿಲ್ಲ, ಬಡಿಯಬೇಕಿಲ್ಲ, ಬಯ್ಯ ಬೇಕಿಲ್ಲ ,ಓದುವಂತೆ ಹೇಳಬೇಕಿಲ್ಲ. ಮನೆಯಲ್ಲಿ ಹೆತ್ತವರು ನೀವು ಟಿವಿ ಆಫ್ ಮಾಡಿ ಪುಸ್ತಕ ಹಿಡಿದು ಓದಿಕೊಂಡು ಕುಳಿತರೆ ಹಾಗೂ ತಮ್ಮಗಳ ನಡವಳಿಕೆಯನ್ನ ಶಿಸ್ತಾಗಿ ಇಟ್ಟುಕೊಂಡರೆ ಮಕ್ಕಳು ಅದನ್ನೇ ಅನುಕರಿಸುತ್ತಾರೆ. 14. ಹೆಣ್ಣು ಮತ್ತು ಗಂಡನ ವರ್ತನೆಯ ಬಗ್ಗೆ ನಾಯಿ, ಬೆಕ್ಕು, ದನ, ಕುರಿ, ನರಿ, ಎಮ್ಮೆ ,ಕೋತಿ ,ಚೇಳು, ಮುಂಗಸಿ ಇತ್ಯಾದಿಗಳಿಗೆ ಹೋಲಿಸಿ ಪ್ರಾಣಿ ಪಕ್ಷಿಗಳಿಗೆ ಅವಮಾನ ಮಾಡಬೇಡಿ. 15. ಪರೋಕ್ಷವಾಗಿ ಬೇರೆಯವರ ಹೆಸರು ಅಥವಾ ಪ್ರಾಣಿ ಪಕ್ಷಿಗಳ ಹೆಸರಿಟ್ಟುಕೊಂಡು ಟೀಕೆ ಮಾಡುವ ಬದಲು ಏನು ಹೇಳಬೇಕೋ ಅದನ್ನ ನೇರವಾಗಿ ಬಿಡಿಸಿ ಹೇಳಿಬಿಡಿ. 16. ಅಡುಗೆ ಹಾಳಾದರೆ ಒಂದು ದಿನ ನಷ್ಟ, ಬೆಳೆ ಹಾಳಾದರೆ ಒಂದು ವರ್ಷ ನಷ್ಟ ಆದರೆ ವಿದ್ಯಾಭ್ಯಾಸ ಹಾಳಾದರೆ ಭವಿಷ್ಯದಲ್ಲಿ ಇಡೀ ಜೀವಮಾನವೇ ನಷ್ಟ.

17. ಬಾಳೊಂದು ನಿಗೂಢ ಪಯಣ, ಆದಿ ಅಂತ್ಯ ನಮ್ಮ ಇಚ್ಛೆಯಂತಿಲ್ಲದ ಯಾನ, ನೋವು ನಲಿವು ಅನಿರೀಕ್ಷಿತ ಸೃಷ್ಟಿಯ ದಾನ, ಭರವಸೆಯಿಂದ ಬದುಕಬೇಕು ಪ್ರತಿಕ್ಷಣ. 18. ಇಂದು ನಾವು ಪಕ್ಷಿಗಳಂತೆ ಆಕಾಶದಲ್ಲಿ ಹಾರುವುದನ್ನು ಕಲಿತಿದ್ದೇವೆ, ನೀರಿನೊಳಗೆ ಮೀನಿನಂತೆ ಈಜುವುದನ್ನು ಕಲಿತಿದ್ದೇವೆ ಆದರೆ ಮನುಷ್ಯ ಜೀವಿಗಳಾಗಿ ಭೂಮಿಯಲ್ಲಿ ಬದುಕುವುದನ್ನು ಮಾತ್ರ ಕಲಿತಿಲ್ಲ. 19. ಸಾಗುತ್ತಲಿದೆ ಬೇಸರದ ಪಯಣ, ಎತ್ತ ನೋಡಿದರತ್ತ ನೋವುಗಳ ದಿಬ್ಬಣ, ಎಲ್ಲೋ ದೂರದಲ್ಲಿದೆ ಖುಷಿಯ ನಿಲ್ದಾಣ, ಅದನ್ನು ಹುಡುಕುತ್ತಾ ಸಾಗುತ್ತಲಿದೆ ಬದುಕಿನ ಪಯಣ.

20. ನಿಮಗೆ ನೋವಾದರೆ ನೀವು ಜೀವಂತವಾಗಿದ್ದೀರಿ ಎಂದರ್ಥ, ಬೇರೆಯವರ ನೋವು ನಿಮಗೆ ಅರ್ಥವಾದರೆ ನೀವು ಮನುಷ್ಯರಾಗಿದ್ದೀರಾ ಎಂದರ್ಥ.

# ರಕ್ತ ಹೆಪ್ಪುಗಟ್ಟಲು ವಿಟಮಿನ್ ಕೆ ಏಕೆ ಮುಖ್ಯ ಈ ಆಹಾರಗಳನ್ನು ಮಿಸ್ ಮಾಡ್ದೆ ತಿನ್ನಿ

ದೇಹ ಆರೋಗ್ಯವಾಗಿರಲು ವಿಟಮಿನ್ ಎ, ಸಿ, ಡಿ ಮಾತ್ರವಲ್ಲ, ವಿಟಮಿನ್ ಕೆ ಕೂಡ ಅತ್ಯಗತ್ಯ. ರಕ್ತ ಹೆಪ್ಪುಗಟ್ಟುವಿಕೆ ಎಲುಬುಗಳ ಬಲ, ಹೃದಯದ ಆರೋಗ್ಯ ಸೇರಿದಂತೆ ದೇಹದ ಹಲವು ಪ್ರಮುಖ ಕಾರ್ಯಗಳಲ್ಲಿ ವಿಟಮಿನ್ ಕೆ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಕೊರತೆಯಾದರೆ ಸಣ್ಣ ಗಾಯವಾದರೂ ರಕ್ತಸ್ರಾವ ಹೆಚ್ಚು ಸಮಯ ಮುಂದುವರಿಯಬಹುದು. ಅಲ್ಲದೆ ದೇಹದಲ್ಲಿ ಸುಲಭವಾಗಿ ನೀಲಿ ಕಲೆಗಳು ಮೂಡುವುದು, ಎಲುಬುಗಳು ದುರ್ಬಲವಾಗುವುದು ಸೇರಿದಂತೆ ಹಲವು ಸಮಸ್ಯೆಗಳು ಕಾಣಿಸಬಹುದು. ಹಾಗಾದರೆ ವಿಟಮಿನ್ ಕೆ ಯಾಕೆ ಮುಖ್ಯ, ಯಾವ ಆಹಾರಗಳಲ್ಲಿ ಹೆಚ್ಚು ಸಿಗುತ್ತದೆ ಮತ್ತು ಕೊರತೆಯ ಲಕ್ಷಣಗಳೇನು ಎಂಬುದನ್ನು ಸ್ಟೋರಿ ಮೂಲಕ ತಿಳಿದುಕೊಳ್ಳಿ. ಅಮೆರಿಕದ ಯುನೈಟೆಡ್ ಸ್ಟೇಟ್ಸ್ ದೇಶದ ನ್ಯಾಷನಲ್ ಇನ್ ಸ್ಟಿಟ್ಯೂಟ್ಸ್ ಆಫ್ ಹೆಲ್ತ್ ಪ್ರಕಾರ, ವಿಟಮಿನ್ ಕೆ ರಕ್ತ ಹೆಪ್ಪುಗಟ್ಟುವಿಕೆಗೆ ಅಗತ್ಯವಾದ ಪ್ರಮುಖ ಪೋಷಕಾಂಶವಾಗಿದೆ. ಗಾಯವಾದಾಗ ರಕ್ತಸ್ರಾವವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಎಲುಬುಗಳನ್ನು ಬಲವಾಗಿರಿಸುತ್ತದೆ. ಕ್ಯಾಲ್ಸಿಯಂ ಅನ್ನು ಸರಿಯಾಗಿ ಬಳಸಿಕೊಳ್ಳಲು ದೇಹಕ್ಕೆ ನೆರವಾಗುತ್ತದೆ.ಮೂಳೆ ಸಾಂದ್ರತೆಯನ್ನು ಕಾಪಾಡಲು ಸಹಕಾರಿ. ಕೆಲವು ಅಧ್ಯಯನಗಳ ಪ್ರಕಾರ ಹೃದಯ ಮತ್ತು ರಕ್ತನಾಳಗಳ ಆರೋಗ್ಯಕ್ಕೂ ನೆರವಾಗುವ ಸಾಧ್ಯತೆ ಇದೆ . ಬಹುತೇಕ ಆರೋಗ್ಯವಂತ ವ್ಯಕ್ತಿಗಳಿಗೆ ಸಮತೋಲನ ಆಹಾರದಿಂದಲೇ ಸಾಕಷ್ಟು ವಿಟಮಿನ್ ಕೆ ದೊರೆಯುತ್ತದೆ. ಆದರೆ, ಕೆಲವು ಜೀರ್ಣಾಂಗ ಸಮಸ್ಯೆಗಳು, ಪೋಷಕಾಂಶ ಹೀರಿಕೊಳ್ಳುವ ಸಮಸ್ಯೆಗಳು, ಕೆಲವು ಔಷಧಿಗಳ ಬಳಕೆ ಇಂತಹ ಸಂದರ್ಭಗಳಲ್ಲಿ ವೈದ್ಯರು ಮಾತ್ರ ವಿಟಮಿನ್ ಕೆ ಸಪ್ಲಿಮೆಂಟ್‌ಗಳನ್ನು ಸೂಚಿಸಬಹುದು. ಮುಖ್ಯವಾಗಿ ರಕ್ತವನ್ನು ತೆಳುವಾಗಿಸುವ ಔಷಧಿಗಳನ್ನು ಸೇವಿಸುವವರು ವೈದ್ಯರ ಸಲಹೆಯಿಲ್ಲದೆ ವಿಟಮಿನ್ ಕೆ ಸಪ್ಲಿಮೆಂಟ್ ಸೇವಿಸಬಾರದು. ಗಾಯವಾದ ನಂತರ ರಕ್ತಸ್ರಾವ ಹೆಚ್ಚು ಸಮಯ ಮುಂದುವರಿಯುವುದು. ದೇಹದಲ್ಲಿ ಸುಲಭವಾಗಿ ನೀಲಿ ಕಲೆಗಳು ಮೂಡುವುದು, ಮೂಗಿನಿಂದ ಆಗಾಗ ರಕ್ತ ಬರುವುದು. ಹಲ್ಲಿನ ಮಾಂಸದಿಂದ ರಕ್ತಸ್ರಾವ ಎಲುಬುಗಳು ದುರ್ಬಲವಾಗುವುದು.ಮೂಳೆ ಮುರಿತದ ಅಪಾಯ ಹೆಚ್ಚಾಗುವುದು ಈ ಲಕ್ಷಣಗಳು ಬೇರೆ ಆರೋಗ್ಯ ಸಮಸ್ಯೆಗಳ ಕಾರಣದಿಂದಲೂ ಕಾಣಿಸಬಹುದು.

# ಪ್ರೋಟೀನ್ ಭರಿತ ಆಹಾರವನ್ನು ಹೇಗೆ ಸೇವಿಸಬೇಕು ತಜ್ಞರು ನೀಡಿದ ಸಲಹೆ ಏನು?



ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸರಿಯಾದ ಪ್ರಮಾಣದ ಪೋಷಕಾಂಶಗಳು ಅಗತ್ಯ. ಮುಖ್ಯವಾಗಿ ಪ್ರೋಟಿನ್ ಭರಿತ ಆಹಾರ, ಆದರೆ ಇದನ್ನು ಸೇವಿಸುವ ವಿಧಾನವೇ ತಪ್ಪಾಗಿದ್ದರೆ ದೇಹಕ್ಕೆ ಬೇಕಾದ ಪೋಷಕಾಂಶಗಳು ಸಿಗದೇ ಇರಬಹುದು. ಕಡಲೆ, ರಾಜ್ಮಾ, ಹೆಸರುಕಾಳಿನಂತಹ ಆಹಾರಗಳನ್ನು ಪೌಷ್ಟಿಕಾಂಶ ಹೆಚ್ಚಿಸಲು ಸೇವಿಸಲಾಗುತ್ತದೆ, ಆದರೆ ಪ್ರತಿಯೊಂದೂ ನೆನೆಸುವುದು, ಮೊಳಕೆ ಭರಿಸುವುದು, ಕುದಿಸುವುದು ಅಥವಾ ಹುರಿ ಯುವುದರಿಂದ ಆರೋಗ್ಯ ಲಾಭವನ್ನು ಪಡೆಯಲಾಗುವುದಿಲ್ಲ. ಹಾಗಿದ್ದರೆ ಪ್ರೋಟೀನ್ ಭರಿತ ಆಹಾರವನ್ನು ಹೇಗೆ ಸೇವಿಸಬೇಕು. ಕಡಲೆ ಉತ್ತಮ ಪ್ರೋಟಿನ್‌ನ ಮೂಲವಾಗಿದೆ ಆದರೆ ಅವುಗಳನ್ನು ತಯಾರು ಮಾಡುವ ವಿಧಾನವು ದೇಹವು ಅವುಗಳನ್ನು ಎಷ್ಟು ಚೆನ್ನಾಗಿ ನಿರ್ವಹಿಸುತ್ತದೆ ಎಂಬುದರ ಮೇಲೆ ಪರಿಣಾಮ ಬೀರುತ್ತದೆ. ಕೆಲವೊಮ್ಮೆ ಮೊಳಕೆ ಭರಿಸಿ ಸೇವಿಸಿದರೆ ಗ್ಯಾಸ್ಟ್ರಿಕ್, ಹೊಟ್ಟೆನೋವಿನಂತಹ ಸಮಸ್ಯೆಗೆ ಕಾರಣ ವಾಗ ಬಹುದು. ಹಾಗಾಗಿ ಕಡಲೆಕಾಳು ಬೇಯಿಸಿ ತಿಂದರೆ ಉತ್ತಮ ಎಂದು ಆಹಾರ ತಜ್ಞರು ಸಲಹೆ ನೀಡಿದ್ದಾರೆ. ಇದು ತೂಕ ನಿಯಂತ್ರಣಕ್ಕೆ, ಮಧುಮೇಹಿಗಳಿಗೆ ಅತ್ಯಂತ ಉಪಯುಕ್ತವಾಗಿದೆ. ಇದು ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಹೊಂದಿದ್ದು ಸಕ್ಕರೆ ಪ್ರಮಾಣ ಕಡಿಮೆ ಮಾಡುತ್ತದೆ. ರಾಜ್ಮಾವನ್ನು ಮೊಳಕೆ ಭರಿಸಿ ತಿಂದರೆ ದೇಹಕ್ಕೆ ಹಿಡಿಸುವುದಿಲ್ಲ. ಇದರಲ್ಲಿರುವ ಕೆಲವು ಅಂಶಗಳು ಹೊಟ್ಟೆಯ ಕಿಣ್ವದ ಅಸ್ವಸ್ಥತೆಗೆ ಕಾರಣ ವಾಗಬಹುದು. ಹಾಗಾಗಿ ಬೇಯಿಸಿ ತಿಂದರೆ ಜೀರ್ಣಕ್ರಿಯೆಗೆ ಉತ್ತಮ. ಮೊಳಕೆಯೊಡೆದ ಹೆಸರುಕಾಳು ಪ್ರತಿಯೊಬ್ಬರು ಸೇವಿಸಲು ಆಸಕ್ತಿ ವಹಿಸುತ್ತಾರೆ. ಜೀರ್ಣಿಸಿ ಕೊಳ್ಳಲು ಸುಲಭ ಮತ್ತು ಉತ್ತಮ ಪೋಷಕಾಂಶಕ್ಕೆ ಬೆಂಬಲಿಸುತ್ತದೆ. ಇದನ್ನು ಮೊಳಕೆ ಒಡೆದು ಅಥವಾ ಬೇಯಿಸಿ ತಿಂದರೂ ಕೂಡ ಉತ್ತಮ ಎಂದು ತಜ್ಞರು ತಿಳಿಸಿದ್ದಾರೆ. ಹಾಗಾಗಿ ನಿಮ್ಮ ಆಹಾರದಲ್ಲಿ ಇದಕ್ಕೆ ಆಧ್ಯತೆಯೂ ಇರಲಿ ಕಡಲೆಕಾಯಿಯನ್ನು ಹುರಿದು ತಿನ್ನುವುದು ಜೀರ್ಣಕ್ರಿಯೆಗೆ ಒಳ್ಳೆಯದು,ಅದರ ಜೊತೆ ರುಚಿಯನ್ನೂ ಹೆಚ್ಚಿಸುತ್ತದೆ. ದೇಹಕ್ಕೆ ಪರಿಣಾಮ ಬೀರಬಹುದು. ಸೋಯಾ ಬೀನ್‌ಗಳು ಮತ್ತು ಸುವುದರಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು. ಇದರಿಂದ ಜೀರ್ಣಕ್ರಿಯೆ ಸುಧಾರಿಸಲು ಸಹಾಯ ಮಾಡುತ್ತದೆ. ಇದನ್ನು ಬೇಯಿಸಿ ಅಥವಾ ಮೊಳಕೆ ಬರಿಸಿ ಎರಡೂ ರೀತಿಯಲ್ಲೂ ಸೇವಿಸಬಹುದು. ಇವೆರಡೂ ವಿಧಾನಗಳು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತವೆ.

# ಬ್ಲೂಬೆರಿ, ಸ್ಟ್ರಾಬೆರಿ, ಬ್ಲ್ಯಾಕ್‌ಬೆರಿ ಯಾವ ಬೆರ್ರಿ ಹಣ್ಣು ಯಾವ ಆರೋಗ್ಯ ಸಮಸ್ಯೆಗೆ ಉತ್ತಮ ತಿಳಿದುಕೊಳ್ಳಿ

ಇತ್ತೀಚಿನ ದಿನಗಳಲ್ಲಿ ಆರೋಗ್ಯಕರ ಆಹಾರದ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚಾಗಿದೆ. ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುವ ಆಹಾರಗಳಲ್ಲಿ ಹಣ್ಣುಗಳಿಗೆ ವಿಶೇಷ ಸ್ಥಾನವಿದ್ದು, ಅವುಗಳಲ್ಲಿ ಬೆರ್ರಿ ಹಣ್ಣುಗಳು ಸೂಪರ್‌ಫುಡ್‌ಗಳೆಂದು ಪರಿಗಣಿಸಲಾಗುತ್ತದೆ. ಬ್ಲೂಬೆರಿ, ಸ್ಟ್ರಾಬೆರಿ, ರಾಸ್ಪ್‌ಬೆರಿ, ಬ್ಲ್ಯಾಕ್‌ಬೆರಿ ಹಾಗೂ ಕ್ರ್ಯಾನ್‌ಬೆರಿ ಹಣ್ಣುಗಳಲ್ಲಿ ಫೈಬರ್, ವಿಟಮಿನ್ ಸಿ, ವಿಟಮಿನ್ ಕೆ, ಮ್ಯಾಂಗನೀಸ್ ಹಾಗೂ ಶಕ್ತಿಶಾಲಿ ಆಂಟಿಆಕ್ಸಿಡೆಂಟ್‌ಗಳಿಂದ ಸಮೃದ್ಧವಾಗಿವೆ. ಇವು ಹೃದಯದ ಆರೋಗ್ಯ, ಮೆದುಳಿನ ಕಾರ್ಯಕ್ಷಮತೆ, ಜೀರ್ಣಕ್ರಿಯೆ ಮತ್ತು ರೋಗನಿರೋಧಕ ಶಕ್ತಿಯನ್ನು ಉತ್ತಮಗೊಳಿಸಲು ಸಹಕಾರಿಯಾಗುತ್ತವೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಹೀಗಾದರೆ ಯಾವ ಬೆರ್ರಿ ಹಣ್ಣು ಯಾವ ಆರೋಗ್ಯ ಲಾಭ ನೀಡುತ್ತದೆ ಮತ್ತು ದಿನಕ್ಕೆ ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಜೊತೆಗೆ, ಯಾರು ಸೇವನೆ ಮಾಡುವಾಗ ಎಚ್ಚರಿಕೆವಹಿಸಬೇಕು. ಬ್ಲೂಬೆರಿಯಲ್ಲಿ ಆಂಥೋಸಯಾನಿನ್ ಎಂಬ ಶಕ್ತಿಶಾಲಿ ಆಂಟಿಆಕ್ಸಿಡೆಂಟ್ ಸಮೃದ್ಧವಾಗಿದೆ. ಇದು ದೇಹದ ಕೋಶಗಳನ್ನು ಫ್ರೀ ರ್‍ಯಾಡಿಕಲ್ ಹಾನಿಯಿಂದ ರಕ್ಷಿಸುತ್ತದೆ. ಮೆದುಳಿನ ಕಾರ್ಯಕ್ಷಮತೆಯನ್ನು ಬೆಂಬಲಿಸುತ್ತದೆ. ಹೃದಯದ ಆರೋಗ್ಯಕ್ಕೆ ಉತ್ತಮ. ಉರಿಯೂತ ಕಡಿಮೆ ಮಾಡಲು ಸಹಕಾರಿ.

ಜ್ಞಾಪಕಶಕ್ತಿಗೆ ನೆರವಾಗಬಹುದು. ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಚರ್ಮದ ಆರೋಗ್ಯ ಕಾಪಾಡುತ್ತದೆ. ಹೃದಯದ ಆರೋಗ್ಯಕ್ಕೆ ನೆರವಾಗುತ್ತದೆ. ಕೊಲೆಸ್ಟ್ರಾಲ್ ನಿಯಂತ್ರಣಕ್ಕೆ ಸಹಕಾರಿ. ಜೀರ್ಣಕ್ರಿಯೆ ಸುಧಾರಿಸುತ್ತದೆ. ಹೊಟ್ಟೆತುಂಬಿದ ಅನುಭವ ನೀಡುತ್ತದೆ. ತೂಕ ನಿಯಂತ್ರಣಕ್ಕೆ ಸಹಕಾರಿ ಕರುಳಿನ ಆರೋಗ್ಯ ಉತ್ತಮಗೊಳಿಸುತ್ತದೆ. ಸ್ಟ್ರಾಬೆರಿ ಹಣ್ಣುಗಳಲ್ಲಿ ಆಂಟಿಆಕ್ಸಿಡೆಂಟ್‌ಗಳು ಮತ್ತು ಪಾಲಿಫಿನಾಲ್‌ಗಳು ಸಮೃದ್ಧವಾಗಿವೆ, ಇವು ನಮ್ಮ ಹೃದಯದ ಆರೋಗ್ಯಕ್ಕೆ ಅವಶ್ಯಕವಾಗಿವೆ ಮತ್ತು ಕೊಲೆಸ್ಟ್ರಾಲ್ ಮಟ್ಟಗಳನ್ನೂ ಕಡಿಮೆ ಮಾಡುತ್ತದೆ ಮತ್ತು ಹೃದ್ರೋಗಗಳು ಎದುರಾಗುವ ಅಪಾಯದ ಸಾಧ್ಯತೆಯನ್ನು ತಗ್ಗಿಸಿ ಆರೋಗ್ಯವನ್ನು ಕಾಪಾಡುತ್ತದೆ.

ನೀವು ಪಿಷ್ಟಭರಿತ ಆಹಾರವನ್ನು ಸೇವಿಸಿದಾಗ (ವಿಶೇಷವಾಗಿ ಅನ್ನ), ನಿಮ್ಮ ರಕ್ತದಲ್ಲಿನ ಸಕ್ಕರೆಯ ಮಟ್ಟ ಧಿಡೀರನೇ ಹೆಚ್ಚಾಗುತ್ತದೆ ಆದರೆ ಅದರೊಂದಿಗೆ ಕೆಲವು ಸ್ಟ್ರಾಬೆರಿಗಳನ್ನು ಸೇವಿಸಿದರೆ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ. ಮಧುಮೇಹ ಇರುವ ವ್ಯಕ್ತಿಗಳಿಗೆ ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಹೊಂದಿರುವ ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುವ ಸಾಮರ್ಥ್ಯವಿರುವ ಸ್ಟ್ರಾಬೆರಿ ಹಣ್ಣುಗಳು ಅತಿ ಸೂಕ್ತವಾಗಿವೆ. ನಮ್ಮ ರೋಗ ನಿರೋಧಕ ಶಕ್ತಿ ಬಲಯುತವಾಗಿರಲು ವಿಟಮಿನ್ ಸಿ ಅಗತ್ಯವಾಗಿದೆ. ಸ್ಟ್ರಾಬೆರಿ ಹಣ್ಣುಗಳಲ್ಲಿ ವಿಟಮಿನ್ ಸಿ ಉತ್ತಮ ಪ್ರಮಾಣದಲ್ಲಿದೆ. ನಿಯಮಿತ ಸೇವನೆಯಿಂದ ರೋಗ ನಿರೋಧಕ ಶಕ್ತಿಯೂ ಬಲಯುತವಾಗಿದ್ದು ಹಲವಾರು ಸೋಂಕು ಮತ್ತು ಬ್ಯಾಕ್ಟೀರಿಯಾಗಳ ಧಾಳಿಯಿಂದ ರಕ್ಷಿಸುತ್ತದೆ. ಸ್ಟ್ರಾಬೆರಿ ಹಣ್ಣುಗಳಲ್ಲಿರುವ ಆಂಟಿ ಆಕ್ಸಿಡೆಂಟುಗಳು ಮತ್ತು ಇತರ ಸಂಯುಕ್ತಗಳು ನಮ್ಮ ದೇಹವನ್ನು ನಿರಾಳಗೊಳಿಸಲು ನೆರವಾಗುತ್ತವೆ. ಅಲ್ಲದೇ ಇದರಲ್ಲಿರುವ ಪೊಟ್ಯಾಶಿಯಂ ರಕ್ತನಾಳಗಳು ಸಡಿಲಗೊಳ್ಳಲು ನೆರವಾಗುವ ಮೂಲಕ ರಕ್ತದ ಒತ್ತಡವನ್ನು ಕಡಿಮೆಗೊಳಿಸಲು ನೆರವಾಗುತ್ತದೆ. ಸ್ಟ್ರಾಬೆರಿ ಹಣ್ಣುಗಳಲ್ಲಿರುವ ಕೆಲವು ಸಂಯುಕ್ತಗಳು ಮೆದುಳಿನ ಕ್ಷಮತೆಯನ್ನು ಹೆಚ್ಚಿಸಿ ಸ್ಮರಣಶಕ್ತಿಯನ್ನು ಉತ್ತಮಗೊಳಿಸಲು ನೆರವಾಗುತ್ತವೆ.



ಅಲ್ಲದೇ ಕ್ಯಾನ್ಸರ್ ಕಾರಕ ಫ್ರೀ ರ್‍ಯಾಡಿಕಲ್ ಎಂಬ ಕಣಗಳಿಂದ ಎದುರಾಗುವ ಘಾಸಿಯಿಂದ ದೇಹವನ್ನು ರಕ್ಷಿಸುತ್ತದೆ ಹಾಗೂ ಸ್ಟ್ರಾಬೆರಿ ಹಣ್ಣುಗಳಲ್ಲಿರುವ ಆಂಟಿ ಆಕ್ಸಿಡೆಂಟುಗಳು ಮೆದುಳಿನ ಆರೋಗ್ಯವನ್ನು ಉತ್ತಮಗೊಳಿಸುತ್ತವೆ.ಸ್ಟ್ರಾಬೆರಿ ಹಣ್ಣುಗಳನ್ನು ತಿನ್ನುವಾಗ ಅದರ ಜೊತೆಗೆ ಎಲೆಗಳನ್ನು ಸಹ ನೀವು ಅಗಿಯಬೇಕು. ಏಕೆಂದರೆ ಎಲೆಗಳು ಹಣ್ಣುಗಳಿಗಿಂತ ಹೆಚ್ಚು ಪೋಷಕಾಂಶಗಳನ್ನು ಹೊಂದಿರುತ್ತವೆ. ಸ್ಟ್ರಾಬೆರಿ ಎಲೆಗಳು ಮೆಗ್ನೀಸಿಯಮ್, ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳನ್ನು ಒಳಗೊಂಡಿದೆ.

